SEVENTH REPORT OF THE COMMITTEE ON PRIVATE MEMBERS' BILLS AND RESOLUTIONS—PRESENTATION.

Sri A. R. PANCHAGAVI.—Sir, I present the Seventh Report of the Committee on Private Members' Bills and Resolutions.

Mr. SPEAKER.—The question is that this Assembly agrees with the Seventh Report of the Committee on Private Members' Bills and Resolutions.

The motion was adopted.

NON-OFFICIAL RESOLUTION

Re: **Making recommendation to the Government of India, to solve border disputes between Mysore and adjoining States on the basis of language, majority of the people and village as a unit and wishes of the people.**

(*Debate Continued*)

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪ್).—ಸ್ವಾಮಿ, ಅಧ್ಯಕ್ಷರೇ, ಈಗ ನಭೆಯ ಮುಂದೆ ಬಂದಿರುವ ಖಾಸಗಿ ನಿರ್ಣಯ ಗಡಿ ವಿವಾದಗಳ ವಿಷಯವಾಗಿ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದು ಬಯಸುತ್ತೇನೆ. ಸ್ವಾಮಿ 1956 ನೇ ಇಸವಿ ನವೆಂಬರ್ ಒಂದನೆಯ ತಾರೀಖಿನಂದು ಈ ರಾಜ್ಯಗಳ ಪುನರ್‌ವಿಂಗಡಣೆ ನಡೆಯಿತು. ಭಾರತ ದೇಶದ ಒಟ್ಟು ಜನರ ಕ್ಷೇಮಾಭಿವೃದ್ಧಿಗಳಿಗನುಗುಣವಾಗಿ ಈ ಭಾಷಾ ಪ್ರಾಂತ ರಚನೆ ಆಯಿತು. ಆದರೆ ಈ ಭಾಷಾವಾರು ಪ್ರಾಂತ ರಚನೆಯಲ್ಲಿ ಮೈಸೂರಿನ ಸಾಧಾರಣ 24 ಲಕ್ಷ ಜನ ಕನ್ನಡಿಗರು ದಿನ ನಿತ್ಯ ಈಗಲೂ ತಮ್ಮ ರೋದನವನ್ನು ಮಾಡುತ್ತಾ ಮಾತ್ರವಲ್ಲದೆ ನಾನಾ ತರಹದ ಚಳುವಳಿಯನ್ನು ಆರಂಭಿಸಿ ತಮಗೆ ಆದ ಕಷ್ಟಗಳನ್ನು ಸರ್ಕಾರದ ಗಮನಕ್ಕೆ ಆಗಾಗ್ಗೆ ತರುತ್ತಾ ಇದ್ದಾರೆ ಮಾತ್ರವಲ್ಲದೆ ಅವರು ನಿತ್ಯ ಕರ್ಫ್ಯೂಗಳಾಗಿ ತಮಗೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಬರುವಂತಹ ಕಷ್ಟಗಳನ್ನೂ ಅನುಭವಿಸುತ್ತಾ ಇದ್ದಾರೆ. ಈ ರಾಜ್ಯ ಪುನರ್ವಿಂಗಡಣೆ ನಾನಾದರೂ ಹೇಳುತ್ತೇನೆ, ಇದು ಸಮರ್ಪಕವಾಗಿ ನಡೆದಿಲ್ಲ ಮಾತ್ರವಲ್ಲದೆ ಈ ಭಾಷಾವಾರು ಪ್ರಾಂತ ರಚನೆ ಏನಾಗಿದೆ ಎಂದರೆ ಗಣಪತಿಯನ್ನು ಮಾಡಲಿಚ್ಚಿಸಿ, ಹನುಮಂತನನ್ನು ನಿರ್ಮಿಸಿದಂತಹ ಒಂದು ವಿಪರ್ಯಾಸವಾಗಿದೆ. ರಾಜ್ಯ ಪುನರ್‌ವಿಂಗಡಣಾ ಆಯೋಗದವರು 1956 ನೆಯ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ ತಮ್ಮ ಅಂತಿಮ ತೀರ್ಮಾನವನ್ನು ಕೈಕೊಂಡಾಗ ಆಗಿನ ಕಾನರಗೋಡು ತಾಲ್ಲೂಕಿನಲ್ಲಿ ಆದರಲ್ಲೂ ಮಂಜೇಶ್ವರ ಫಿರ್ಕಾದ ಜನತಾ ಪ್ರತಿನಿಧಿಗಳು ಅಲ್ಲದೆ ಅಂದಿನ ವಿಧಾನ ಸಭೆಯ ಸದಸ್ಯರಾಗಿದ್ದು ಮತ್ತು ಇಂದಿನ ಮಾನ್ಯ ಸಭೆಯ ಅಧ್ಯಕ್ಷರಾದ ಶ್ರೀಮಾನ್ ವೈಕುಂಠ ಬಾಳಿಗಾರವರು ಮಾತ್ರವಲ್ಲದೆ ಕಾಸರ ಗೋಡು ತಾಲ್ಲೂಕಿನ ವಿಧಾನ ಸಭಾ ಸದಸ್ಯರಾದ ಎನ್. ಎಸ್. ಮಾಗ್ಡಾರ್ ಅವರು ಮತ್ತು ಆ ಕ್ಷೇತ್ರದ ಪಾರ್ಲಿಮೆಂಟಿನ ಸದಸ್ಯರಾದ ಶ್ರೀಮಾನ್ ಬೆನಗಲ್ ರಾಮರಾವ್ ಅವರು ಇದನ್ನು ಪ್ರತಿಭಟಿಸಿದರು, ಮದರಾಸ್ ವಿಧಾನ ಸಭೆಯಲ್ಲಿ ಮಾತ್ರವಲ್ಲದೆ ಡೆಲ್ಲಿಯಲ್ಲೂ ಕಾಸರಗೋಡಿನ ಜನತೆಗೆ ಬಹಳ ಅನ್ಯಾಯವಾಗಿದೆ ಆದ್ದರಿಂದ ಚಂದ್ರಗಿರಿ ಹೊಳೆಗೆ ಉತ್ತರ ಭಾಗವನ್ನು ನಮ್ಮ ಕರ್ನಾಟಕಕ್ಕೆ ಸೇರಿಸಬೇಕೆಂದು ಅವರು ರೋಧನ ಮಾಡಿದರು ಮಾತ್ರವಲ್ಲದೆ ಕಾಸರಗೋಡಿನ ಲಕ್ಷಾಂತರ ಜನ ಡೆಲ್ಲಿಗೆ ತಂತಿಯನ್ನು ಕಳುಹಿಸಿ ಈ ಸಂದರ್ಭದಲ್ಲಿ ಅನ್ಯಾಯವಾಗಿದೆ ಇದನ್ನು ತಡೆಹಿಡಿಯಬೇಕು ಈ ಜನವನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಅರಣ್ಯ ರೋಧನವನ್ನು ಮಾಡಿದರು. ನಾನು ಹೇಳಿದ ಹಾಗೆ ಅದು ಅರಣ್ಯ ರೋಧನವೇ ಆಯಿತು. ಈ ರೋಧನವನ್ನು ನಮ್ಮ ಮೈಸೂರು ಸರಕಾರ ಆಗಲಿ ಇಲ್ಲವೇ ಈ ರಾಜ್ಯ ಪುನರ್‌ವಿಂಗಡಣಾ ಆಯೋಗದವರೇ ಆಗಲಿ ಲಕ್ಷಕ್ಕೆ ತೆಗೆದುಕೊಳ್ಳದೇ ಸಾಧಾರಣ ಎರಡೂವರೆ ಲಕ್ಷ ಕನ್ನಡಿಗರಿಗೆ ತುಂಬಾ ಅನ್ಯಾಯವನ್ನು ಮಾಡಿದ್ದಾರೆ, ಇದು ಅನ್ಯಾಯದ ಪರಮಾವಧಿ ಎಂದರೂ ಅತಿಶಯೋಕ್ತಿಯಾಗ

ಲಾರದು. ಕಾಸರಗೋಡಿನ ಉತ್ತರ ಭಾಗದಲ್ಲಿ ಎಂದರೆ ಚಂದ್ರಗಿರಿ ಹೊಳೆಗೆ ಉತ್ತರಕ್ಕೆ ಸಾದಾರಣ 274 ಚದುರ ಮೈಲಿ ಏಸ್ತೀರ್ಣದಲ್ಲಿ 36 ಪಂಚಾಯ್ತಿಗಳಲ್ಲಿ 35 ಪಂಚಾಯ್ತಿಗಳು ಕನ್ನಡಿಗರನ್ನೇ ಒಳಗೊಂಡಿವೆ. ಇನ್ನು ಸಾಧಾರಣ 72 ಗ್ರಾಮಗಳನ್ನು ಇದಕ್ಕೆ ಸೇರಿಸಬೇಕು, ಆ ಭಾಗದಲ್ಲಿ ಎರಡೂವರೆ ಲಕ್ಷ ಕನ್ನಡಿಗರು ಇದ್ದಾರೆ. ಮಾತ್ರವಲ್ಲದೆ ಅಲ್ಲಿ ಸಾಧಾರಣ 35 ಸಾವಿರ ಕನ್ನಡಿಗ ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಮಾಡುತ್ತಾ ಇದ್ದಾರೆ. ಈಗಾಗಲೇ ತಮಗೆ ತಿಳಿದಂತೆ ಈ ಕನ್ನಡ ವಿದ್ಯಾರ್ಥಿಗಳಿಗೆ ಅಲ್ಲಿ ಹೈಸ್ಕೂಲ್ ತರಗತಿಯಲ್ಲಿ ಪಾಸ್ ಆಪವರಿಗೆ ಮೈಸೂರು ಕಾಲೇಜುಗಳಲ್ಲಿ ಸೀಟುಗಳನ್ನು ದೊರಕಿಸುವಂತಹ ಒಂದು ಏರ್ಪಾಡು ಇಲ್ಲದೆ ಸಾಧಾರಣ 300 ವಿದ್ಯಾರ್ಥಿಗಳು ಈಗ ಕಷ್ಟವನ್ನು ಪಡುತ್ತಾ ಇದ್ದಾರೆ. ಈ ವಿಷಯದಲ್ಲಿ ಅವರು ಕೇರಳ ಸರಕಾರವನ್ನು ಎಷ್ಟೇ ಒತ್ತಾಯ ಮಾಡಿದರೂ ಏನೂ ಪ್ರಯೋಜನವಾಗಿಲ್ಲ. ಮತ್ತು ಮೈಸೂರು ಸರ್ಕಾರದವರು ಕೇರಳ ಸರ್ಕಾರದವರಿಗೆ ಈ ವಿಷಯದಲ್ಲಿ ಈವರೆಗೂ ಮನವಿಯನ್ನೇನೂ ಮಾಡಿಕೊಂಡಿಲ್ಲ ಮಾತ್ರವಲ್ಲದೆ ಮೈಸೂರು ಸರ್ಕಾರದವರೂ ಸಹ ವಿಶಾಲ ದೃಷ್ಟಿಯಿಂದ ಅವರು ನಮ್ಮವರು ನಮ್ಮ ಮಕ್ಕಳು ವಿದ್ಯಾರ್ಜನೆ ಮಾಡಬೇಕು ಅವರೂ ಮುಂದೆ ಬರಬೇಕೆಂಬ ದೃಷ್ಟಿಯನ್ನು ಇಟ್ಟುಕೊಳ್ಳದೆ ಈವರೆಗೂ ಯಾವ ವಿಧವಾದ ನಿರ್ಧಾರವನ್ನೂ ಕೈಕೊಳ್ಳದೆ 300 ಜನ ವಿದ್ಯಾರ್ಥಿಗಳು ಮುಂದಿನ ಭವ್ಯಭಾರತವನ್ನು ನಿರ್ಮಿಸುವ ಜನತೆ ವಿದ್ಯೆ ಇಲ್ಲದೆ ತೊಳಲುತ್ತಾ ಇದ್ದಾರೆ ಮಾತ್ರವಲ್ಲದೆ ಅವರ ಪಾಡನ್ನು ಹೇಳಿ ಪ್ರಯೋಜನವಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅವರು ಕಷ್ಟಪಡುತ್ತಾ ಇದ್ದಾರೆ.

ಸ್ವಾಮಿ, ಇನ್ನು ಈ ಆಯೋಗದವರ ಹತ್ತಿರ ಕಾಂಗೆನ್‌ಗಾಡಿನ ಉತ್ತರ ಭಾಗ ಅಂದರೆ ಚಂದ್ರಗಿರಿ ಹೊಳೆಯ ಉತ್ತರ ಭಾಗ ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಕನ್ನಡ ಜನತೆ ಅಷ್ಟೊಂದು ಪರಿಣಾಮ ಬೀರದೆ ಇದ್ದರೂ ಕೇರಳದ ಮಲೆಯಾಳ ರೀಜನರ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಗೋವಿಂದನ್ ನಾಯರ್‌ರವರು 1957ರಲ್ಲಿ ಕಾಗದ ಬರೆದು ಕನ್ನಡಿಗರಿಗೆ ಅನ್ಯಾಯವಾಗಿದೆ, ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಕರ್ನಾಟಕಕ್ಕೆ ಸೇರಿಸುವುದಕ್ಕೆ ಅಭ್ಯಂತರವಿಲ್ಲ, ಅದು ಕರ್ನಾಟಕಕ್ಕೇ ಹೋಗಬೇಕು ಎಂದು ಪಾರ್ಲಮೆಂಟ್ ಸದಸ್ಯರಾದ ಶ್ರೀನಿವಾಸಮಲ್ಯರವರಿಗೆ ತಿಳಿಸಿದ್ದಾರೆ. ಅವರು ಬರೆದ ಪತ್ರ ನನ್ನ ಹತ್ತಿರವಿದೆ. ಅಲ್ಲದೆ ಕಾಸರಗೋಡಿನ ಎಂ ಎಲ್ ಎ ಕುಂಞಿ ಕೃಷ್ಣನಾಯರ್‌ರವರು ಜನತೆಗೆ ಬರೆದ ಕಾಗದದಲ್ಲಿ ಕೂಡ ಕಾಸರಗೋಡು ಕರ್ನಾಟಕಕ್ಕೇ ಸೇರಬೇಕೆಂದು ಸೂಚನೆಮಾಡಿದ್ದಾರೆ. ಆದರೆ ಸಂಬಂಧಪಟ್ಟವರು ಅಸಂಖ್ಯಾತ ಕನ್ನಡಿಗರು ಕೇಳುವುದನ್ನು ಅನುಲಕ್ಷಿಸಿ ನಮ್ಮನ್ನು ಕೈಬಿಟ್ಟಿದ್ದಾರೆ. ಇದು ಹೇಗಾಗಿದೆಯೆಂದರೆ ಮತ್ತೊಬ್ಬನ ಕಷ್ಟಗೊತ್ತಿಲ್ಲದೆ ಸ್ವಾರ್ಥಿಗಳು ಅಧಿಕಾರವನ್ನು ದುರುಪಯೋಗ ಮಾಡಿದಂತಾಗಿದೆ. ಕಾಸರಗೋಡಿನ ಉತ್ತರ ಭಾಗ ಭೌಗೋಳಿಕವಾಗಿ ಅಥವಾ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕಕ್ಕೇ ಸೇರಬೇಕು.

Mr. SPEAKER.—The House will now rise for tea and will meet again after half an hour.

The House adjourned for recess at Ten of the Clock and reassembled at Thirty-Five Minutes past Ten of the Clock.

[MR. DEPUTY SPEAKER in the Chair.]

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಈಗಿನ ಅಡಳಿತಗಾರರ ದೌರ್ಜನ್ಯದಿಂದಾಗಿ ನಮ್ಮ ಕರ್ನಾಟಕಕ್ಕೆ ಸೇರಿದ ಸಾಧಾರಣವಾಗಿ 25 ಲಕ್ಷ ಕನ್ನಡಿಗರು ಬೇರೆ ಬೇರೆ ಪ್ರಾಂತಗಳಲ್ಲಿ ಸೇರಿಕೊಂಡಿದ್ದಾರೆ. ಉದಾಹರಣೆಗೆ ಕೇರಳಕ್ಕೆ ಸೇರಿದ ಕಾಸರಗೋಡು, ಮದ್ರಾಸಿಗೆ ಸೇರಿದ ತಾಳವಾಡಿ, ಹೊಸೂರು, ನೀಲಗಿರಿ, ಆಂಧ್ರಕ್ಕೆ ಸೇರಿದ ಮಡಕಸಿರಾ, ಮಹಾರಾಷ್ಟ್ರಕ್ಕೆ ಸೇರಿದ ಅಕ್ಕಲಕೋಟೆ, ಜತ್ತ ಮುಂತ ದ ಕಡೆಯ ಕನ್ನಡಿಗರು ಬಹಳ ಕಷ್ಟಗಳನ್ನನುಭವಿಸುತ್ತಿದ್ದಾರೆ. ಭಾಷಾವಾರು ಪ್ರಾಂತ ರಚನೆ ಮಾಡುವಾಗ ಅಲ್ಪಸಂಖ್ಯಾತರ ಅಭಿರುಚಿ ಮತ್ತು ಆಕಾಂಕ್ಷೆಗಳನ್ನು ಗಮನಕ್ಕೆ ತೆಗೆದುಕೊಂಡು ರಾಜ್ಯವನ್ನಾಳಬೇಕೆಂದಿದ್ದರೂ ಕೂಡ ಹಾಗೆ ಮಾಡದಿರುವುದರಿಂದ ನಮ್ಮ ಕನ್ನಡಿಗರು ತುಂಬಾ ಕಷ್ಟಪಡುತ್ತಿದ್ದಾರೆ. ಉದಾಹರಣೆಗೆ ಕಾಸರಗೋಡಿನ ಸುಮಾರು 300

(ಶ್ರೀ ಬಿ. ಭಾಸ್ಕರಶೆಟ್ಟಿ)

ಶಿಕ್ಷಣಾರ್ಥಿಗಳ ಭವಿಷ್ಯ ಹಾಳಾಗಿರುವುದು ಒಂದು ನಿದರ್ಶನವಾಗಿದೆ. ಅವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಬರಮಾಡಿಕೊಳ್ಳುವುದಕ್ಕಾಗಿಲ್ಲ ಮತ್ತು ಕೇರಳ ವಿಶ್ವವಿದ್ಯಾನಿಲಯದಲ್ಲೂ ಅವರಿಗೆ ಬೇಕಾದ ಸೌಕರ್ಯ ಕೊಟ್ಟಿರುವುದಿಲ್ಲ. ಈಗಾಗಲೆ ಕಾಸರಗೋಡಿನಲ್ಲಿರುವ ಕಾಲೇಜುಗಳಲ್ಲಿ ಹೆಚ್ಚಾಗಿ ಮಲೆಯಾಳಿಗಳನ್ನೇ ಸೇರಿಸಿಕೊಂಡು ಕನ್ನಡ ವಿದ್ಯಾರ್ಥಿಗಳಿಗೆ ನಷ್ಟವಾಗಿದೆ. ಅವರ ವಿಚಾರದಲ್ಲಿ ಕೇರಳ ಸರ್ಕಾರ ವಿಳಂಬ ಧೋರಣೆಯನ್ನನುಸರಿಸಿದ್ದರೆ ಮುಂದಿನ ಪೀಳಿಗೆಯ ಭವಿಷ್ಯವನ್ನು ಕಾಪಾಡುವುದಕ್ಕೆ ಮೈಸೂರು ಸರ್ಕಾರವಾದರೂ ಕೈಹಾಕಿ ಯಾವರೀತಿ ಈ ಸಮಸ್ಯೆ ಪರಿಹಾರ ಮಾಡಬೇಕೆಂಬುದಕ್ಕೆ ದಾರಿ ಕಂಡುಹಿಡಿಯಬೇಕು. ಇಲ್ಲವಿದ್ದರೆ ಇನ್ನೂ ಹೆಚ್ಚು ತೊಂದರೆ ಉದ್ಭವವಾಗಬಹುದು. ಅಷ್ಟು ಮಾತ್ರವಲ್ಲದೆ ಅಲ್ಲಿನ ಕನ್ನಡಿಗರು ಎಷ್ಟೊರತನಕ ಆಲೋಚನೆ ಮಾಡಿದ್ದಾರೆಂದರೆ ಕೇರಳ ಸರ್ಕಾರದ ಮುಂದೆ ಪ್ರತಿಭಟನೆ ಸಲ್ಲಿಸಿ ಒಂದುವೇಳೆ ಕನ್ನಡ ಜನರ ಕೂಗಿಗೆ ಆ ಸರ್ಕಾರ ಮಾನ್ಯತೆ ಕೊಡದಿದ್ದರೆ ವಿಧಾನಸೌಧದ ಮುಂದೆ ಮೈಸೂರು ಸರಕಾರದೆದುರಿಗೆ ಸತ್ಯಾಗ್ರಹ ಹೂಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದಕ್ಕೆ ಮುಂಚೆ ನಾವೇನಾದರೂ ಆ ವಿದ್ಯಾರ್ಥಿಗಳ ವಿಷಯದಲ್ಲಿ ಮಾಡುವುದಿದ್ದರೆ ಕೇರಳದವರಿಗೆ ಬರೆದು ಕನ್ನಡ ಜನರ ಭವಿಷ್ಯವನ್ನು ಕಾಪಾಡಲು ಪ್ರಯತ್ನಪಡಬೇಕೆಂದು ಒತ್ತಾಯಮಾಡುತ್ತೇನೆ.

ಈಗ ಚಾಮರಾಜನಗರಕ್ಕೆ 10 ಮೈಲಿ ದೂರದಲ್ಲಿರುವ ತಾಳವಾಡಿಯ ಜನರು ಅಚ್ಚ ಕನ್ನಡಿಗರು. ಅವರು ದಿನನಿತ್ಯ ಮೈಸೂರಿಗೆ ಸೇರಬೇಕೆಂದು ಹಂಬಲಿಸುತ್ತಾ ಬಹಳ ಕಷ್ಟಕ್ಕೀಡಾಗಿ ಕಣ್ಣೀರಿಡುತ್ತಿದ್ದಾರೆ. ಆದರೆ ಈ ಕನ್ನಡಿಗರ ರೋದನ ಅರಣ್ಯರೋದನವಾಗಿದೆ. ನಮ್ಮ ಮುಖಂಡರು ಮಹಾರಾಷ್ಟ್ರ—ಮೈಸೂರು ಗಡಿ ವಿಚಾರಕ್ಕೆ ಹೊಂದಾಣಿಕೆಗೆ ಪ್ರಾಶಸ್ತ್ಯ ಕೊಡದೆ 24 ಲಕ್ಷ ಕನ್ನಡಿಗರ ಕಷ್ಟವನ್ನು ನಿರ್ಲಕ್ಷ್ಯಮಾಡಿದ್ದಾರೆ. ಆದುದರಿಂದ ಹೊಂದಾಣಿಕೆಯೇನಾದರೂ ಬರುವುದಿದ್ದರೆ ಆದಷ್ಟು ಬೇಗ ಬಂದು ಮಹಾರಾಷ್ಟ್ರದವರಿಗೆ ಅಥವಾ ಕನ್ನಡಿಗರಿಗೆ ಯಾವ ಹೊಂದಾಣಿಕೆ ಮಾಡಬಹುದೋ ನೋಡಿ ಕಾರ್ಯಕ್ರಮ ಕೈಗೆಕೊಂಡು ಒಂದು ನಿರ್ದಿಷ್ಟ ನೀತಿಯನ್ನನುಸರಿಸಬೇಕು ಆದಷ್ಟು ಬೇಗ ಇದನ್ನು ತೀರ್ಮಾನ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಫಸಲಾಲಿ ಕಮಿಷನ್ನಿನವರು ಕಾಸರಗೋಡನ್ನು ಆಡಳಿತ ದೃಷ್ಟಿಯಿಂದ ಕೇರಳಾಕ್ಕೆ ಸೇರಿಸಿದ್ದಾರೆ. ಆದರೂ ರಾಜ ಪೂರ್ವಿಂಗಡಣಾ ಸಮಿತಿಯವರು ಕಾಸರಗೋಡಿನ ವಿಷಯವನ್ನು ಬಹಳ ಚೆನ್ನಾಗಿ ಬರೆದಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಗೆ ಅದು ಸೇರಬೇಕಾದ್ದು ಯೋಗ್ಯ. ಭಾಷಾವಾರು ಆಧಾರದಮೇಲೆ ಮತ್ತು ಆಡಳಿತ ದೃಷ್ಟಿಯಿಂದ ಇಡೀ ತಾಲ್ಲೂಕು ಕನ್ನಡಿಗರಿಗೇ ಸೇರಬೇಕಾದ್ದು ನ್ಯಾಯ. ಯಾವ ದೃಷ್ಟಿಯಿಂದ ನೋಡಿದರೂ ಕಾಸರಗೋಡು ಮಂಗಳೂರಿಗೆ ಹೊಂದಿಕೊಂಡಿದೆ. ಕಾಸರಗೋಡು ತಾಲ್ಲೂಕಿನಲ್ಲಿ ಚಂದ್ರಗಿರಿ ಹೊಳೆ ಉತ್ತರಕ್ಕೆ ಸಾಧಾರಣವಾಗಿ 7 ಸಾವಿರ ಎಕರೆ ಪ್ರದೇಶದಲ್ಲಿ ಅಡಿಕೆ ತೋಟವಿದೆ. ಇವರ ಅಡಕೆಗೆ ಮಾರ್ಕೆಟ್ಟು ಎಂದರೆ ಮಂಗಳೂರು. ಮತ್ತೆ ಇವರಿಗೆ ಬೇಕಾಗುವ ಪ್ರತಿ ನಿತ್ಯದ ಸಾಮಾನುಗಳಿಗೂ ಇವರುಗಳು ಮಂಗಳೂರನ್ನೇ ನಂಬಿಕೊಂಡಿದ್ದಾರೆ. ಮತ್ತು ಪ್ರತಿಯೊಂದು ಸರಬರಾಜೂ ಮಂಗಳೂರಿನ ಕಡೆಯಿಂದಲೇ ಮಾಡಿಕೊಳ್ಳುತ್ತಿದ್ದಾರೆ. ಯಾವ ದೃಷ್ಟಿಯಿಂದ ನೋಡಿದರೂ ಕಾಸರಗೋಡಿನ ಜನತೆ ಮಂಗಳೂರನ್ನು ಹೊಂದಿಕೊಂಡಿದ್ದರೇನೆ ಅವರಿಗೆ ಅನುಕೂಲಗಳು ದೊರೆಯುತ್ತವೆ. ಆದರೆ ಈ ಹಿಂದೆ ಫಸಲಾಲಿ ಕಮಿಷನ್ನು ಮಾಡಿದಾಗ ಅದರಲ್ಲಿ ದಿವಂಗತ ಕೆ. ಎಂ. ಪಣಿಕ್ಕರ್‌ರವರು ಮೆಂಬರಾಗಿದ್ದರೂ ಕೂಡ ಅವರು ಕಾಸರಗೋಡಿನ ಜನತೆಗೆ ಬಹಳ ಅನ್ಯಾಯವನ್ನು ಮಾಡಿ ಕಾಸರಗೋಡು ಕೇರಳದಲ್ಲೇ ಉಳಿಯುವಂತೆ ಮಾಡಿದರು. ಆದುದರಿಂದ ಈ ಕಾಸರಗೋಡಿನ ಜನತೆಯನ್ನು ಈಗಲಾದರೂ ಕರ್ನಾಟಕಕ್ಕೆ ಸೇರಿಸಿ ಅವರುಗಳು ಪಡುತ್ತಿರುವ ಬವಣೆಯನ್ನು ಹೋಗಲಾಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅಷ್ಟೇ ಅಲ್ಲ. ಕನ್ನಡ ಮಾತನಾಡುವ ಇನ್ನೂ ಬೇರೆ ಬೇರೆ ಭಾಗಗಳು ನಮ್ಮ ಮೈಸೂರಿಗೆ ಸೇರದೆ ಈಗಿರುವ ಮೈಸೂರಿನ ಭೂಪಟವೇ ವಿರೂಪಗೊಂಡಂತೆ ಇದೆ. ಇದಕ್ಕೆ ಈಗ ಯಾವ ರೂಪವೂ ಇಲ್ಲ. ಕನ್ನಡಿಗರನ್ನೆಲ್ಲಾ ಬಹುವಾಗಿ ಅಲಕ್ಷಿಸಿರುವುದರಿಂದಾಗಿ ಅವರುಗಳು ಇನ್ನೂ ಹಲವು ಭಾಗಗಳಲ್ಲಿ ಹಾಗೇ ಬಹಳವಾಗಿ ಉಳಿದಿದ್ದಾರೆ. ಹೀಗೆ ಇನ್ನು ಮುಂದಕ್ಕೂ ಕನ್ನಡ ಜನತೆಯ ಅಭಿರುಚಿಗಳನ್ನು ಮತ್ತು ಅವರ ಅವಶ್ಯಕತೆಗಳನ್ನು ಅಲಕ್ಷಿಸಿ ಅವರನ್ನೂ ಹಾಗೆಯೇ ಉಳಿಸಿಕೊಳ್ಳುವ ಪ್ರಯತ್ನ ನಡೆದಲ್ಲಿ ಮುಂದೆ ಬಹು ಗಂಭೀರವಾದ ಪರಿಸ್ಥಿತಿ ಮುಟ್ಟಿ ಅದನ್ನು ಎದುರಿಸಬೇಕಾದೀತು ಎಂದು ನಾನು ಇಲ್ಲಿ ಹೇಳುತ್ತೇನೆ. ಈಗಾಗಲೇ ಕಾಸರಗೋಡಿನ ಜನತೆ ತಮ್ಮ ಬವಣೆಯನ್ನು ತೋರಿಸಿಕೊಳ್ಳುವುದಕ್ಕಾಗಿ ಅನೇಕ ಕಡೆಗಳಲ್ಲಿ ಮತ ಪ್ರದರ್ಶನ ನಡೆಸಿದರು. ದೆಹಲಿಯಲ್ಲಿ ಮತ್ತು ಎಲ್ಲೆಲ್ಲಿ ಕಾಂಗ್ರೆಸ್ಸು ಮುಖಂಡರುಗಳು ಹಾಗೂ ಶಾಸನ ಸಭಾ ಸದಸ್ಯರುಗಳು ಸೇರುತ್ತಾರೋ ಅಲ್ಲಿಗೆಲ್ಲಾ ಹೋಗಿ ತಮ್ಮ ಮನವಿಗಳನ್ನು ಸಲ್ಲಿಸಿ ಬಂದಿದ್ದಾರೆ ತಮ್ಮ ಕುಂದುಕೊರತೆಗಳನ್ನೆಲ್ಲಾ ವಿವರಿಸಿ ಹೇಳಿ ಬಂದಿದ್ದಾರೆ. ಆದುದರಿಂದ ಇನ್ನು ಮುಂದಕ್ಕೆ ಅವರ ತಾಳ್ಮೆಯನ್ನು ಕೆಡಲಿಕ್ಕೆ ಬಿಡಬಾರದು. ಇಷ್ಟೊರತನಕ ಎಷ್ಟೋ ಪ್ರದರ್ಶನಗಳನ್ನು ನಡೆಸಿದ್ದಾರೆ. ಹೋದಸಾರಿ ಎಂದರೆ 18ನೇ ಮೇ 1963

ರಲ್ಲಿ ಮಂಗಳೂರಿನಲ್ಲಿ ಒಂದು ರಾಜಕೀಯ ಸಮ್ಮೇಳನ ನಡೆದಾಗ ಸಾಧಾರಣವಾಗಿ ಎರಡು ಸಾವಿರ ಕನ್ನಡಿಗರು ಮತ್ತು ಕೆಲವು ವಿಧಾನಸಭಾ ಸದಸ್ಯರುಗಳು ಇವರುಗಳನ್ನೊಳಗೊಂಡು ಒಂದು ದೊಡ್ಡ ಮತ ಪ್ರದರ್ಶನವನ್ನು ನಡೆಸಿದರು. ಅಲ್ಲಿ ನಡೆದ ಸಮ್ಮೇಳನಕ್ಕೆ ಕೇವಲ 30 ಜನ ಪ್ರತಿನಿಧಿಗಳು ಮಾತ್ರ ಬಂದಿದ್ದರು ಮತ್ತು ಅದು ಬರೀ ಒಂದು ರಾಜಕೀಯ ಸಮ್ಮೇಳನವಾಗಿತ್ತು. ಹಾಗಿದ್ದರೂ ಕೂಡ ಅಲ್ಲಿಗೆ ಬೇರೆ ಇತರ ಜನರನ್ನೂ ಸೇರಿಸಿಕೊಂಡು ಪೇಪರಿಗೆ ಕೊಡುವಾಗ ಸುಮ್ಮನೆ ಎರಡು ಸಾವಿರ ಪ್ರತಿನಿಧಿಗಳು ಬಂದಿದ್ದರು ಎಂದು ದೊಡ್ಡದಾಗಿ ಪ್ರಕಟಣೆಯನ್ನು ಹೊರಡಿಸಿದರು. ಆ ಸಮ್ಮೇಳನಕ್ಕೆ ಆಗ ಮಾನ್ಯ ಶ್ರೀ ಕಾಮರಾಜ ನಾಡಾರರವರು ಹಾಗೂ ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಮತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರೂ ಬಂದಿದ್ದರು. ಆಗ ಅಲ್ಲಿಗೆ ಕಾಸರಗೋಡು ಜನತೆಯ ಪರವಾಗಿ ಬಂದಿದ್ದ ಪ್ರತಿನಿಧಿಗಳು ಇವರನ್ನೆಲ್ಲಾ ಭೇಟಿ ಮಾಡಿ ಅವರ ಮುಂದೆ ತಮ್ಮ ಕಷ್ಟ ಕಾರ್ಪಣ್ಯಗಳನ್ನೆಲ್ಲಾ ವಿವರಿಸಿ ಹೇಳಿದ್ದಾರೆ ಮತ್ತು ಇಷ್ಟೇ ಅಲ್ಲದೆ ಆ ಸಂದರ್ಭದಲ್ಲಿ ಅವರಿಗೆ ಒಂದು ದೊಡ್ಡ ಮನವಿಯನ್ನೂ ಒಪ್ಪಿಸಿದರು. ಆದರೆ ನಮ್ಮ ಮಾನ್ಯ ಕಾಮರಾಜ ನಾಡಾರ್‌ರವರು ಮಂತ್ರಿಗಳಾಗಿದ್ದಾಗ ಹೇಳುತ್ತಿದ್ದಂತೆ "ಪಾರ್ಕಲಾಂ" ಎನ್ನುವ ಭಾಷೆಯಂತೆ ಇಲ್ಲಿಯೂ ಹೇಳಿ ಹೋದರು. ಅಲ್ಲದೆ ಅಲ್ಲಿಗೆ ಬಂದಿದ್ದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಹೇಳಿ ಬಂದರು. 1962ನೇ ಇಸವಿಯಲ್ಲಿ ವಿಧಾನಸೌಧದ ಮುಂದೆ ಕಾಸರಗೋಡಿನಿಂದ ಬಂದ ಸತ್ಯಾಗ್ರಹಿಗಳು ಮತ ಪ್ರದರ್ಶನ ನಡೆಸಿದಾಗಲೂ ಕೂಡ ನಮ್ಮ ಮುಖ್ಯ ಮಂತ್ರಿಗಳೂ ಇದೇ ಭಾಷೆಯನ್ನೇ ಉಪಯೋಗಿಸಿ ಹೇಳಿದರು ಮತ್ತು ಅದೇ ಉತ್ತರವನ್ನು ಹೇಳಿದರು. ಈ ರೀತಿ ಹೇಳುತ್ತಿರುವುದು ಸರಿಯೇ ಎಂದು ನಾನು ಇಲ್ಲಿ ಪುನಃ ಕೇಳಬೇಕಾಗಿದೆ. ಈಗ ನಮ್ಮ ಪ್ರಧಾನ ಮಂತ್ರಿಗಳಾಗಿರುವ ಶ್ರೀಮಾನ್ ಲಾಲ್ ಬಹದ್ದೂರ್ ಶಾಸ್ತ್ರಿಯವರೂ ಕೂಡ ಇದನ್ನು ಆದಷ್ಟು ಬೇಗ ತೀರ್ಮಾನ ಮಾಡೋಣ ಎಂದು ಮಾನ್ಯ ನಿಜಲಿಂಗಪ್ಪನವರಿಗೂ ಹಾಗೂ ಶ್ರೀ ಕಾಮರಾಜ ನಾಡಾರ್‌ರವರಿಗೂ ವಿಷಯವನ್ನು ಹೇಳಿದರು ಮತ್ತು ಈ ಕಾಸರಗೋಡಿನ ಭಾಗಗಳು ಆದಷ್ಟು ಬೇಗ ಕರ್ನಾಟಕದೊಳಕ್ಕೆ ಸೇರುವಂತೆ ತಕ್ಕ ಪ್ರಯತ್ನ ಮಾಡುವುದು ಅಗತ್ಯ. ಅಲ್ಲದೆ ಮೈಸೂರಿನ ರಾಜ್ಯದೊಳಕ್ಕೆ ಇನ್ನೂ ಕೆಲವು ಕನ್ನಡದ ಭಾಗಗಳು ಸೇರಬೇಕಾದವು ಬಿಟ್ಟು ಹೋಗಿವೆ ಅವುಗಳನ್ನೆಲ್ಲಾ ನಮ್ಮ ದೇಶದೊಳಕ್ಕೆ ಸೇರಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಈ ಕೂಡಲೇ ನಿರ್ಧಾರ ಕೈಗೊಳ್ಳಬೇಕು. ಏಕೆಂದರೆ, ಬೆಂಕಿ ಬಿದ್ದಾಗ ಬಾವಿ ತೋಡಿಸಲಿಕ್ಕೆ ಹೋದರು ಎನ್ನುವಂತಾಗಬಾರದು. ಮುಂದಿನ ಜನವರಿ ತಿಂಗಳೊಗಾಗಿ ಕಾಸರಗೋಡನ್ನು ನಮ್ಮ ರಾಜ್ಯಕ್ಕೆ ಸೇರಿಸಲು ತಕ್ಕ ಕ್ರಮವನ್ನು ಕೈಗೊಳ್ಳದೇ ಹೋದರೆ ದಕ್ಷಿಣ ಕನ್ನಡ ಜಿಲ್ಲೆಯ ವಿಧಾನ ಸಭಾ ಸದಸ್ಯರನ್ನೊಳಗೊಂಡು ಕಾಸರಗೋಡಿನ ಮುಖಂಡರಾದ ಶ್ರೀಮಾನ್ ಮಹಾಬಲ ಭಂಡಾರಿಯವರ ನೇತೃತ್ವದಲ್ಲಿ ಒಂದು ಸಾವಿರ ಜನ ಸತ್ಯಾಗ್ರಹಿಗಳು ವಿಧಾನಸೌಧದ ಮುಂದೆ ಬಂದು ಸತ್ಯಾಗ್ರಹ ನಡೆಸಬೇಕೆಂದು ತೀರ್ಮಾನ ಮಾಡಿದ್ದಾರೆ. ಅದಕ್ಕಿಂತ ಮುಂಚೆ ತೀರ್ಮಾನ ಕೈಗೊಂಡು ಕಾಸರಗೋಡನ್ನು ಆದಷ್ಟು ಬೇಗ ಕರ್ನಾಟಕಕ್ಕೆ ಸೇರಿಸಿಕೊಳ್ಳಲು ಪ್ರಯತ್ನ ನಡೆಸಬೇಕು. ಹಾಗೆ ಮಾಡದೇ ಹೋದರೆ ಕಾಸರಗೋಡಿನಲ್ಲಿರುವ ಪ್ರತಿಯೊಂದು ಕುಟುಂಬದವರಿಂದಲೂ ಒಬ್ಬೊಬ್ಬರು ಬಂದು ಈ ವಿಧಾನಸೌಧದ ಮುಂದೆ ಅನ್ನ ಸತ್ಯಾಗ್ರಹ ಮಾಡುವವರಾಗಿದ್ದಾರೆ. ಆದುದರಿಂದ ನಮ್ಮ ಕನ್ನಡ ಜನತೆಯನ್ನು ಆದಷ್ಟು ಬೇಗ ನಮ್ಮ ರಾಜ್ಯದೊಳಕ್ಕೆ ಸೇರಿಸಿಕೊಳ್ಳುವುದು ಅವಶ್ಯಕವಾಗಿದೆ ಮತ್ತು ಇನ್ನು ವಿಳಂಬ ಮಾಡುವುದೂ ಸರಿಯಲ್ಲ. ಹಾಗೆ ಮಹಾರಾಷ್ಟ್ರಕ್ಕೆ ಕೆಲವು ಭಾಗಗಳು ನಮ್ಮ ದೇಶದ್ದು ಸೇರಿಹೋಗಿವೆ. ಅವನ್ನೂ ಕೂಡ ಒಂದು ಹೊಂದಾಣಿಕೆಯ ಮೇಲೆ ಬೇರೆ ಬೇರೆ ಪ್ರಾಂತಗಳವರ ಒಪ್ಪಿಗೆಯನ್ನು ಪಡೆದು ಕರ್ನಾಟಕಕ್ಕೆ ಸೇರುವ ಭಾಗಗಳ ಬಗ್ಗೆ ಇರುವ ವಿವಾದಗಳನ್ನು ಪರಿಹರಿಸಬೇಕು. ಹಾಗೇ ಇದರ ಬಗ್ಗೆ ಸರಕಾರ ಬೇಗನೆ ಒಂದು ನಿರ್ದಿಷ್ಟವಾದ ಯೋಜನೆಯನ್ನ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಸುಬ್ಬಯ್ಯ ನಾಯಕ್ (ಸೂಳ್ಯ). —ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ನಿರ್ಣಯ ಈ ರೀತಿ ಇದೆ :

ಮೈಸೂರು ಮತ್ತು ಮಹಾರಾಷ್ಟ್ರವನ್ನೊಳಗೊಂಡ ನೆರೆಯ ರಾಜ್ಯಗಳ ನಡೆವೆ ಇರತಕ್ಕ ಗಡಿ ವಿವಾದಗಳನ್ನು ಇನ್ನೂ ಹೆಚ್ಚು ವಿಳಂಬ ಮಾಡದೆ ಈ ಕೆಳಕಂಡ ಆಧಾರಗಳ ಮೇರೆಗೆ ಬಗೆಹರಿಸ ಬೇಕೆಂದು ಈ ಸಭೆಯವರು ಭಾರತ ಸರಕಾರದವರಿಗೆ ಶಿಫಾರಸ್ಸು ಮಾಡುತ್ತಾರೆ.

(1) ಭಾಷಾ ಸಂಖ್ಯಾತರು,
(2) ಪ್ರಾದೇಶಿಕ ಸಾಮೀಪ್ಯ,
(3) ಗ್ರಾಮವನ್ನೇ ಘಟಕವಾಗಿ ಪರಿಗಣಿಸುವುದು ಮತ್ತು
(4) ಜನರ ಅಭೀಷ್ಟೆ.

(ಶ್ರೀ ಸುಬ್ಬಯ್ಯ ನಾಯಕ್)

ಈ ವಿಚಾರಗಳನ್ನು ತಿಳಿಸುವ ಒಂದು ನಿರ್ಣಯ ಒಂದು ಹಿಂದೆಯೇ ಬಂದಿತ್ತು. ಆದ್ದರಿಂದ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ವಿ.ಎಸ್.ಪಾಟೀಲರವರು ಈಗಿನ ಪರಿಸ್ಥಿತಿಯಲ್ಲಿ ತರಬಾರದಾಗಿತ್ತು. ಏಕೆಂದರೆ ಈಗ ತಂದಿರುವ ಸಮಯ ಸರಿಯಾದುದು ಅಲ್ಲ. ಈಗಿರುವ ಸಂಗತಿಯೂ ಆಗಿದ್ದ ಸಂಗತಿಯೂ ಬೇರೆ. ನಿಮ್ಮ ಗಮನಕ್ಕೆ ಈಗ ನಾನು ತರುವುದೆನೆಂದರೆ ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಜವಹರಲಾಲ್‌ರವರು ಇಂದು ಇಲ್ಲ. ಇದರಿಂದ ನಮ್ಮ ರಾಜ್ಯದಲ್ಲಿ ಇದನ್ನು ಅನ್ವಯಿಸುವುದಕ್ಕೆ ತೊಂದರೆಯಾಗಿದೆ. ಪ್ರಧಾನಿಗಳ ಪಟ್ಟದಲ್ಲಿ ಬಂದವರು ಸ್ವಲ್ಪ ಅನುಭವಗಳನ್ನು ಪಡೆದುಕೊಳ್ಳಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಈಗ ಪ್ರಧಾನಿಗಳಾಗಿ ಬಂದಿರುವ ಶ್ರೀ ಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಕೂಡ ಅಂತಹ ಕಾಲಾವಕಾಶವನ್ನು ಪಡೆಯುವುದು ಅಗತ್ಯವಾಗಿದೆ. ಆದುದರಿಂದ ಈಗ ಮಾನ್ಯ ಪಾಟೀಲ್‌ರವರು ಈ ನಿರ್ಣಯವನ್ನು ಹಿಂತೆಗೆದುಕೊಳ್ಳುವುದು ಸೂಕ್ತ. ಇನ್ನೊಂದು ವಿಚಾರವನ್ನು ಇಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು. ರಾಜ್ಯಗಳ ಪುನರ್ವಿಂಗಡಣೆಯು ಒಂದು ಸಾರಿ ಆದ ಮೇಲೆ ಅದರಲ್ಲಿರುವ ಇತರ ಸಣ್ಣ ಭಾಗಗಳು ಸ್ವಲ್ಪ ಹೊಂದಾಣಿಕೆಯಿಂದ ಇರಬೇಕು, ಅದನ್ನು ಪುನಃ ಪರಿಶೀಲನೆಗೆ ತೆಗೆದುಕೊಂಡು ಅಮೂರಾಗ್ರವಾಗಿ ಮಾಡುವುದು ಸರಿಯಲ್ಲ ಎಂದು ಇರುವಾಗ ಈ ನಿರ್ಣಯವನ್ನು ಅವರು ಹಿಂತೆಗೆದುಕೊಳ್ಳುವುದು ಮೇಲು. ಅಲ್ಲದೆ ಈಗಿರುವ ಆಹಾರ ಧಾನ್ಯಗಳ ಪರಿಸ್ಥಿತಿ ಹಿಂದೆ 42-43 ರಲ್ಲಿದ್ದಂತಹ ವಿಷಮ ಪರಿಸ್ಥಿತಿಗೆ ಬರುವುದೋ ಎಂಬ ಶಂಕೆ ಇದೆ.

ಆದರೆ ಕಾಂಗ್ರೆಸ್ಸಿನವರ ದಕ್ಷತಾಪೂರ್ಣವಾದ ಆಡಳಿತಕ್ಕೆ ಬೆಟ್ಟದಂತೆ ಮಹತ್ತರವಾಗಿ ಬರತಕ್ಕ ಕ್ಷಾಮಡಾಮರುಗಳನ್ನು ಹೋಗಲಾಡಿಸುವ ಶಕ್ತಿ ಇದೆ. ಈ ಆಹಾರ ಧಾನ್ಯಗಳ ವಿಚಾರದಲ್ಲಿ ಇನ್ನು ಕೆಲವೊಂದು ದಿನಗಳಲ್ಲೇ ಇದರ ಪೂರೈಕೆಯನ್ನು ಸಾಧಿಸಿ ದೇಶಾದ್ಯಂತವೂ ಶಾಂತ ವಾತಾವರಣವಿರುವಂತೆ ಮಾಡಲಾಗುವುದು. ಅಂಥ ಪರಿಸ್ಥಿತಿ ಬೇಗನೆ ಬರಲಿದೆ. ಈಗಾಗಲೇ ಕೆಲವು ದೊಡ್ಡ ದೊಡ್ಡ ಪಟ್ಟಣಗಳ ಧಾನ್ಯಗಳ ಧಾರಣವಾಸಿಗಳು 10-15 ರೂಪಾಯಿಗಳವರೆಗೂ ಇಳಿದು ಹೋಗಿರುತ್ತದೆಂದು ನಾನು ಕೇಳುತ್ತಿದ್ದೇನೆ.

ಇನ್ನೂ ಒಂದು ವಿಚಾರವೆಂದರೆ :- ಆ ಚೈನಾ ಮತ್ತು ಪಾಕೀಸ್ತಾನಗಳ ವಿಚಾರದಲ್ಲಿ ಒಂದು ಅನುಕೂಲವಾದ ಪರಿಸ್ಥಿತಿಯನ್ನೂ ಹೊಂದಿಲ್ಲ. ಹೇಗೆಲ್ಲಾ ಇರುವಾಗ ನಾವಿಲ್ಲಿ ಭಾಷಾ ಗೊಂದಲ ಮತ್ತು ಈ ಪ್ರಾಂತ್ಯಗಳ ಗೊಂದಲವನ್ನು ಹುಟ್ಟಿಕೊಂಡರೆ ನಾವು ಇದರಿಂದ ನಮ್ಮ ವೈರಿಗಳಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಈ ಚರ್ಚೆಗೆ ಇದು ಸರಿಯಾದ ಕಾಲವಲ್ಲ ಎಂದು ಹೇಳುತ್ತೇನೆ. ಒಂದಾವರ್ತಿ ಈ ವಿಚಾರವಾಗಲೇ 1956 ರಲ್ಲೇ ತೀರ್ಮಾನವಾಗಿ ಹೋಗಿದೆ. ಆದ್ದರಿಂದ ನಾವು ಇದನ್ನು ಪುನಃ ಪುನಃ ಕೆಣಕುವುದು ಸರಿಯಲ್ಲ. ಹಿಂದೆ ಶ್ರೀ ಪೊಟ್ಟಿ ಶ್ರೀರಾಮುಲು ಅವರು ಭಾಷಾವಾರು ಪ್ರಾಂತ ರಚನೆಯಾಗಬೇಕೆಂದು ಉಪವಾಸ ಮುಷ್ಕರವನ್ನು ಹೂಡಿ ಅವರು ನತ್ತು ಹೋದ ವಿಚಾರ ಎಲ್ಲರಿಗೂ ಗೊತ್ತಿದೆ. ಆ ಒಂದು ಬೇಡಿಕೆಯನ್ನು ಮುಂದಿಟ್ಟುಕೊಂಡು ಅಂದು ಭಾಷಾವಾರು ಪ್ರಾಂತ್ಯಗಳ ರಚನೆಯಾಯಿತು. ಆದರೆ ಹಾಗೆ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿದು ಸರಿಯೋ ಸರಿಯಲ್ಲವೋ ಎಂಬ ಅನುಮಾನವಿರತಕ್ಕ ಜನ ಈಗಲೂ ಇದ್ದಾರೆ. ಆದರೆ ಈಗ ಅದು ಸರಿಯೋ ಅಲ್ಲವೋ ಆಗಿಹೋಗಿದೆ. ನಾವೆಲ್ಲರೂ ಆದಕ್ಕೆ ಹೊಂದಿಕೊಂಡು ಹೋಗಬೇಕಾಗಿದೆ. ಒಟ್ಟಿನಲ್ಲಿ ನಮಗೆ ಆ ಒಂದು ಮನಸ್ಸು ಸರಿಯಾಗಿದ್ದರೆ ನಾವು ಎಲ್ಲಬೇಕಾದರೂ ಇರಬಹುದು. ಯಾವ ವಾತಾವರಣದಲ್ಲಾದರೂ ಬೆಳೆಯಬಹುದು, ಯಾವ ಭಾಷೆಯನ್ನಾದರೂ ಬೆಳೆಸಬಹುದು, ಉದಾಹರಣೆಗೆ ಹೇಳುವುದಾದರೆ : ನಾವು ಈ ದಿವಸ ಡೆಲ್ಲಿಗೋ ಅಥವಾ ಇನ್ಯಾವ ಪರರಾಷ್ಟ್ರಕ್ಕೋ ಹೋದಲ್ಲಿ ನಾವು ಅಲ್ಲಿಯ ಹವಾ, ಉಡುಪು, ಆಹಾರ ಮತ್ತು ಭಾಷೆಗೆ ಹೊಂದಿಕೊಂಡು ಹೋಗುವುದಿಲ್ಲವೇನು ? ಈ ದಿವಸ ಬೆಳಗಾಂನಲ್ಲಿರತಕ್ಕ ಕನ್ನಡಿಗರು ಕನ್ನಡಿಗರಾಗಿದ್ದರೂ ಅವರು ಆ ಮರಾಠಾ ಭಾಷೆಯನ್ನೇ ಅನುಸರಿಸಿಕೊಂಡು ಹೊಂದಾಣಿಕೆಯಿಂದ ಹೋಗುತ್ತಿಲ್ಲವೆ ? ಹೀಗೆ ಜನರಲ್ಲಿ ಒಂದು ಹೊಂದಾವಣಿಯಿಂದ ಹೋಗುತ್ತಿಲ್ಲವೆ ? ಹೀಗೆ ಜನರಲ್ಲಿ ಒಂದು ಹೊಂದಾಣಿಕೆಯಿಂದ ಹೋಗತಕ್ಕ ಭಾವನೆ ಬೆಳೆಯಬೇಕು. ಇಲ್ಲದಿದ್ದರೆ ಇಡೀ ದೇಶಕ್ಕೆ ಆದರಿಂದ ಒಳ್ಳೆಯದಾಗುವುದಿಲ್ಲ. ಆದರೆ ಈ ವಿಚಾರ ಹೇಗಿದೆಯೆಂದರೆ: ಇದು ಗ್ರಾಮ್ಯಭಾಷೆಯಲ್ಲ ಹೇಳುವಂತೆ ಒಂದು ಉರಿಮೂಳೆ ಅಂದರೆ ಕೆಂಪು ಇರುವೆ ಇದ್ದಹಾಗೆ ಇಲ್ಲವೆ ಒಂದು ಕಣಜದ ಹುಳದ ಗೂಡಿದ್ದ ಹಾಗೆ ಈ ವಿಚಾರವಿದೆ. ಅಂಥ ಹುಳದ ಗೂಡಿಗೆ ನಾವೇನಾದರೂ ಒಂದು ಕಲ್ಲನ್ನೆಸೆದಿದ್ದೇ ಆದರೆ ಆ ಹುಳಗಳು ಕೇವಲ ಕಲ್ಲನ್ನು ಎಸೆದವರನ್ನು ಮಾತ್ರವಲ್ಲದೆ ಅಲ್ಲಿ ಅಕ್ಕ ಪಕ್ಕದವರನ್ನೆಲ್ಲಾ ಕಚ್ಚುತ್ತವೆ. ಆದರಿಂದ ಒಂದಾವರ್ತಿ ಏಕನೂತ್ರದಿಂದ ಪೋಣಿಕೆ ಆಗಿರತಕ್ಕ ರಾಜ್ಯದ ವಿಚಾರವನ್ನು ನಾವು ಪುನಃ ಪುನಾ ಬಿಚ್ಚುವುದಕ್ಕೆ ಹೋಗಬಾರದು ಎಂದು ಹೇಳುತ್ತಿ

ದ್ದೇನೆ. ಇದರಿಂದ ಅವರಿಗೂ ಗಂಡಾಂತರವನ್ನು ತಂದುಕೊಳ್ಳುವುದಲ್ಲದೆ ಇತರರಿಗೂ ಗಂಡಾಂತರವನ್ನು ತರುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಕಣಜದ ಹುಳುವಿನ ಗೂಡಿಗೆ ಕಲ್ಲೆಸೆದಂಥಾ ಸಂದರ್ಭವಿರುವುದರಿಂದ ಇದನ್ನು ಯಾರೂ ಮಾಡಬಾರದೆಂದು ಹೇಳುತ್ತೇನೆ. ಒಂದಾವರ್ತಿ ಹೊಂದಾಣಿಕೆ ಮಾಡಿದ ರಾಜ್ಯವನ್ನು ಮತ್ತೆ ಕೆಣಕಿದರೆ ಇದರಿಂದ ಕೆಣಕತಕ್ಕವರಿಗೇ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚಾಗಬಹುದು. ಆದ್ದರಿಂದ ಇದನ್ನು ಕೈಬಿಡುವುದುತ್ತಮವೆಂದು ನನ್ನ ಅಭಿಪ್ರಾಯ. ಈ ದಿವಸ ಕೆಲವರು ಕರ್ನಾಟಕ ದೇಶವನ್ನು ಬಿಟ್ಟು ಏನೋ ಒಂದು ಹುರುಪಿನಲ್ಲಿ ಮಹರಾಷ್ಟ್ರಕ್ಕೆ ಹೋಗಬಹುದು. ಆದರೆ ಆಗ ಆಗ ಅವರಿಗೆ ಅಲ್ಲಿ ಇಲ್ಲಿದ್ದಷ್ಟು ಅನುಕೂಲಗಳು ಸಿಗದೆ ಅವರಿಗೆ ಅಲ್ಲಿ ಅನಾನುಕೂಲಗಳೇ ಹೆಚ್ಚಾಗಬಹುದು. ಅಲ್ಲಿಯವರು ಇಲ್ಲಿದ್ದಷ್ಟು ಅನುಕೂಲತೆಗಳನ್ನು ಕೊಡುವೆ ಹೋಗಬಹುದು. ಆದ್ದರಿಂದ ಇಂಥಾದ್ದಕ್ಕೆಲ್ಲಾ ಕೈ ಹಚ್ಚಬಾರದೆಂದು ನಾನು ತಿಳಿಸಲಪೇಕ್ಷಿಸುತ್ತೇನೆ.

ಇನ್ನು ನಿರ್ಣಯದ ಸೂಚಕರು ತಮ್ಮ ನಿರ್ಣಯದಲ್ಲಿ ಈ ಪುನರ್ವಿಂಗಡಣೆಯ ವಿಚಾರವನ್ನು ಪ್ರಸ್ತಾಪಿಸುತ್ತಾ: ಅವರು 3-4 ವಿಚಾರಗಳ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕೃತ ಮಾಡಿ ಅವರು ಹೇಳಿರತಕ್ಕದ್ದು ಏನೆಂದರೆ: ಭಾಷಾ ಸಂಖ್ಯಾತರು, ಪ್ರಾದೇಶಿಕ ಸಾಮೀಪ್ಯ, ಗ್ರಾಮವನ್ನೇ ಘಟಕವಾಗಿ ಪರಿಗಣಿಸುವುದು, ಜನರ ಅಭಿಷ್ಟೆ ಇತ್ಯಾದಿ ಅಧಾರದ ಮೇಲೆ ಈ ವಿಚಾರವನ್ನು ತೀರ್ಮಾನ ಮಾಡಬೇಕೆಂದು ಹೇಳಿದ್ದಾರೆ. ಆದರೆ ಈ ಆಧಾರಗಳು ಒಂದೂ ಸರಿಯಾದವುಗಳಲ್ಲ. ಇಲ್ಲಿ ಜನರ ಅಭೀಷ್ಟೆ ಎಂದು ಹೇಳಿದ್ದಾರೆ. ಒಂದು ಭಾಷೆಯನ್ನಾಡತಕ್ಕ ಜನರು ಇನ್ನೊಂದು ಭಾಷೆಯನ್ನಾಡತಕ್ಕ ರಾಜ್ಯದಲ್ಲಿರಬಹುದು. ಇಂಥಾ ಜನರು ಇಲ್ಲೇ ಇರಬೇಕೆಂಬುದನ್ನು ಕಡ್ಡಾಯ ಮಾಡಬಾರದು. ಇನ್ನು ಪ್ರಾದೇಶಿಕ ಸಾಮೀಪ್ಯದ ವಿಚಾರ ಹೇಳಿದ್ದಾರೆ—ಬೆಳಗಾಂಗೆ ಸೇರಿರತಕ್ಕ ಭಾಗಗಳು ಮಹಾರಾಷ್ಟ್ರಕ್ಕೂ ಸಮೀಪವಾಗಿರಬಹುದು, ಇತ್ತ ಕರ್ನಾಟಕಕ್ಕೂ ಸಮೀಪವಾಗಿರಬಹುದು. ಆದುದರಿಂದ ಇದನ್ನು ಒಂದು ಆಧಾರವಾಗಿ ಇಟ್ಟುಕೊಳ್ಳಬೇಕೆಂದು ಹೇಳಿರತಕ್ಕದ್ದು ಸರಿಯಲ್ಲ. ಇನ್ನು ನಾನು ಆ ಶ್ರೀ ಭಾತ್ಕರಶೆಟ್ಟರ ಥೋರಣೆಯಲ್ಲೇ ಮಾತನಾಡಬೇಕೆಂದರೆ ನಮ್ಮ ಕನ್ನಡ ರಾಜ್ಯಕ್ಕೆ ಸೇರಬೇಕಾಗಿರತಕ್ಕಂಥ ಕನ್ನಡ ಪ್ರದೇಶಗಳ ಅನೇಕವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿರತಕ್ಕ ಕಾಸರಗೋಡು, ಬೆಂಗಳೂರಿಗೆ ಸಮೀಪದಲ್ಲಿರತಕ್ಕ ಹೊಸೂರು, ಮದಕಶಿರಾ ಮತ್ತು ತಳಕವಾಡಿ ಫಿರ್ಕ, ಸೋರಾಪುರ, ಅಕ್ಕಲಕೋಟೆ, ಹೀಗೆ ಇನ್ನು ಅನೇಕ ಕನ್ನಡಭಾಗಗಳು ಈ ದಿವಸ ಹೊರಗಡೆಯಲ್ಲಿವೆ. ಇವೆಲ್ಲ ನಮಗೆ ಬರತೇಬೇಕು. ಅದಾಗ್ಯೂ ಅವುಗಳನ್ನು ಒತ್ತಾಯಪಡಿಸಿ ತೆಗೆದುಕೊಳ್ಳುವುದಕ್ಕೆ ಇದು ಸರಿಯಾದ ಸಮಯವಲ್ಲ. ಅದಕ್ಕಾಗಿ ನಾವು ಸುಮ್ಮನಿದ್ದೇವೆ. ಕಾಸರಗೋಡಿನ ಜನರು ಈಗಲೂ ತುಳು ಮಾತನಾಡುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಅಲ್ಲಿ ತೌಳಸಾಮ್ರಾಜ್ಯವೆಂಬ ಹೆಸರಿನ ರಾಜ್ಯವೇ ಇತ್ತೆಂಬ ಪ್ರಸಿದ್ಧಿಯನ್ನು ಈಗಲೂ ಪಡೆದಿದೆ. ಅವರ ಆಚರಣೆ, ಭಾಷೆ ಇತ್ಯಾದಿ ಅನೇಕ ವಿಚಾರಗಳಲ್ಲಿ ಅವರಿಗೂ ನಮಗೂ ಹೊಂದಾವಣಿಕೆಯಿದೆ. ಕೊಂಕಣಿಯನ್ನು ಮೊನ್ನೆ ಮಾನ್ಯ ಸದಸ್ಯರೊಬ್ಬರು ಇಲ್ಲಿ ಮರಾಠಿ ಭಾಷೆಗೆ ಸೇರುತ್ತದೆಂದು ಹೇಳಿದಂತೆ ತುಳು ಕನ್ನಡಕ್ಕೆ ಸಂಬಂಧಪಟ್ಟ ಭಾಷೆ. ಏನೇ ಆಗಲೀ ಇಂಥಾ ಅಲ್ಪಸ್ವಲ್ಪ ವಿರುಪೇರುಗಳಿದ್ದರೂ ಸ್ಥಿತಿಸ್ಥಾಪನಾಶಕ್ತಿಯುಳ್ಳ ಮನಸ್ಸನ್ನು ಪಡೆದಿರತಕ್ಕ ಮನುಷ್ಯನು ಇವುಗಳನ್ನು ಸೈರಿಸಿಕೊಳ್ಳತಕ್ಕ ಅಭ್ಯಾಸ ಮಾಡಿಕೊಳ್ಳಬೇಕು, ಹಾಗೆ ಮಾಡುವುದೊಳ್ಳೆಯದು.

ಅದಕ್ಕಾಗಿಯೇ ನನ್ನ ಮಾನ್ಯ ಮಿತ್ರರು ಕೆಲವರು ಇದು ಈಗ ಸಮಯವಲ್ಲ. ಈಗ ಆ ರೀತಿ ಕೇಳುವುದು ಸರಿಯಲ್ಲವೆಂದು ಹೇಳಿದರು. ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಏಕಕಂಠದಿಂದ ಆ ರೀತಿ ಹೇಳುವುದಿಲ್ಲ ಅಂದರೆ ಈಗಲೇ ಅದು ನಮ್ಮ ಕರ್ನಾಟಕಕ್ಕೆ ಸೇರಬೇಕೆಂದೂ ಹೇಳುವುದಿಲ್ಲ. ಇಲ್ಲವೇ ಹೋದರೆ ಜಾಗ್ರತೆಯಾಗಿ ಅವರೂ ಬಂದು ನಮ್ಮೊಡನೆ ಸೇರಬೇಕೆಂದು ಪ್ರತಿಭಟನೆ ಮಾಡುತ್ತಿದ್ದರು. ಅಲ್ಲಿ ಈ ನಿರ್ಣಯ ತಂದ ಮಾನ್ಯ ಸದಸ್ಯರಿಗೆ ಪ್ರೋತ್ಸಾಹ ಮಾಡುವುದಕ್ಕೆ ಸುಲಭವಾಗುತ್ತಿತ್ತು. ಕಾಸರಗೋಡು ತಾಲ್ಲೂಕಿನವರು ಎಂದೋ ಇಲ್ಲಿ ಬಂದು ಸೇರಬೇಕಾಗಿತ್ತು. ಅವರಿಗೆ ಎಷ್ಟೋ ಆಸೆಯಿದೆ ಶ್ರೀಮಾನ್ ಭಾಸ್ಕರಶೆಟ್ಟಿಯವರು ಹೇಳಿದ ಹಾಗೆ ಅಲ್ಲಿನ ಕನ್ನಡ ವಿದ್ಯಾರ್ಥಿಗಳಿಗೆ ಬಹಳ ಅನಾನುಕೂಲಗಳಾಗಿವೆ. ಆದರೆ ನಿಜವಾಗಿ ಅವರ ಕಾರ್ಯ ಭ್ರಷ್ಟತೆ, ಕಾರ್ಯ ವಿಹೀನತೆಗಳಿಂದ ನಮ್ಮ ರಾಜ್ಯ ಸರಕಾರವು ಅವರಿಗೆ ಅನುಕೂಲ ಮಾಡಿಕೊಟ್ಟಿಲ್ಲವೆಂದು ಹೇಳಬಹುದು. ಅವರು ಕೇಳುವುದಕ್ಕೆ ಮೊದಲೇ ನಾವು ಅವರಿಗೆ ಕಾಲೇಜುಗಳಲ್ಲಿ ಸೀಟುಗಳನ್ನು ಒದಗಿಸಿಕೊಡಬೇಕು ಎಂಬುದಾಗಿ ಹೇಳುವುದು ಅಷ್ಟಾಗಿ ಸರಿಯಲ್ಲ. ಈವರೆಗೆ ಅವರು ಸೀಟು ಕೇಳಿಲ್ಲ. ನಾವು ಕೊಟ್ಟಿಲ್ಲ ಇನ್ನು ಮೈಸೂರು ಸರಕಾರ ಅಲ್ಲಿ ಹೋಗಿ ಸೀಟುಗಳು ಬೇಕೋ ಎಂದು ತಾನಾಗಿಯೇ ಕೇಳಹೋಗುವುದು ಸರಿಯಾಗಿಲ್ಲ. ಆದರೆ ಅವರಿಗೆ ಶ್ರೀಮಾನ್ ಭಾಸ್ಕರಶೆಟ್ಟಿಯವರು ಹೇಳಿದಷ್ಟು ಅನ್ಯಾಯವಾಗಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ಬಂಧುಗಳಿಗೆ ಅನ್ಯಾಯವಾಗಿದೆಯೆಂದು ಸರ್ಕಾರದವರನ್ನು ಮೈಸೂರಿನವರು ಕೇಳಬೇಕು.

ಶ್ರೀ ಎಸ್. ನುಬ್ಬಯ್ಯನಾಯಕ್. - ನಮ್ಮದನ್ನು ನಾವು ಸುಧಾರಿಸಿಕೊಂಡು ಹೋಗುವುದಕ್ಕೆ ಜಾಗರೂಕರಾಗಿರಬೇಕು. ಅದಕ್ಕಿಂತ ಹೆಚ್ಚಿಗೆ ಹೋದರೆ ಇನ್ನೂ ಹೆಚ್ಚು ಕೆಲಸವಾಗುತ್ತದೆ. ಮಾನ್ಯ ಸ್ನೇಹಿತರು ಅಡ್ಡ ಮಾತನ್ನು ಆಡುವುದು ಸರಿಯಲ್ಲ. ಪ್ರಾಂತ ಪುನರ್ವಿಂಗಡಣೆ ವಿಚಾರ ಮಾಡುವಾಗ ಇತರ ವಿಷಯಗಳನ್ನು ಹೇಳುವುದು ಎತರ ನ್ಯಾಯ ? ಅದು ಶಿವಪೂಜೆಯಲ್ಲಿ ಕರಡಿ ಬಿಟ್ಟಹಾಗಾಗುತ್ತದೆ. ಕಾನರಗೂಡಿನಲ್ಲಿರತಕ್ಕ ಜನರಿಗೆ ಬಹಳ ಅನಾನುಕೂಲಗಳಾಗಿವೆಯೆಂಬುದಾಗಿ ನಾನೂ ಹೇಳುತ್ತೇನೆ. ಅದರಲ್ಲೂ ಅಲ್ಲಿ ನುಮಾರು 15-16 ಸಾವಿರ ಜನ ಷೆಡ್ಯೂಲ್ಡ್ ಟ್ರೈಬಿನವರು ಇದ್ದಾರೆ. ಅವರ ಸ್ಥಾನಮಾನಗಳಿಗೆ ಚ್ಯುತಿ ಬಂದಿದೆ. ಹೆರ್ಲದಲ್ಲಿ ಒಂದು ಹಾಸ್ಟಲನ್ನು ರಚನೆಮಾಡಿದ್ದೆವು. ಅಲ್ಲಿಗೆ ವಿದ್ಯಾರ್ಥಿಗಳು ಸರಿಯಾಗಿ ಬರುತ್ತಾ ಇಲ್ಲ. ಅಲ್ಲಿ ಅಗ್ರಿಕಲ್ ಚರಲ್ ಕಾರ್ಯೋನಿಗಳನ್ನು ಮಾಡದೆ ಹಾಗೆಯೇ ಬಿಟ್ಟಿದ್ದಾರೆ. ಈ ಕಾರಣದಿಂದ ಕಾನರಗೋಡು ತಾಲ್ಲೂಕಿನ ಶೇ. 100 ರಷ್ಟು ಜನ ಕರ್ನಾಟಕಕ್ಕೆ ಬರಬೇಕೆಂಬುದು ಸ್ಪತಃಸಿದ್ಧ, ಬರತಕ್ಕದ್ದು ನಿಜ. ಈ ಪ್ರಶ್ನೆಯನ್ನು ನಾನು ಆಗಾಗ ಈ ಸಭೆಯಲ್ಲಿ ಹೇಳುತ್ತಾ ಬಂದಿದ್ದರೂ ಅದಕ್ಕೆ ಯಾರೂ ಬೆರೆ ಕೊಡುತ್ತಾ ಇಲ್ಲ. ಮಾನ್ಯತೆ ಕೊಡುತ್ತಾ ಇಲ್ಲ. ಇದನ್ನು ಪದೇ ಪದೇ ಇಲ್ಲಿ ಹೇಳಿದ್ದೇನೆ. ಈ ವಿಚಾರವನ್ನು ಸಂಬಂಧಪಟ್ಟವರಲ್ಲರಿಗೂ ತಿಳಿಸಲಾಗಿದೆ. ಕೇಂದ್ರ ಸರ್ಕಾರಕ್ಕೂ ಮತ್ತು ಪ್ರಾಂತ ಸರ್ಕಾರಕ್ಕೂ ಈ ವಿಚಾರ ಚೆನ್ನಾಗಿ ಗೊತ್ತುಂಟು ಸರ್ವವೇದ್ಯವಾಗಿದೆ. ಇದನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಸಮಯ ಬಂದಾಗ್ಗೆ ಅದನ್ನು ಮಾಡುತ್ತೀರೆಂದು ನಾನು ನಂಬಿದ್ದೇನೆ. ಆದಕಾರಣ ನಾವು ಒಮ್ಮೆ 1956 ರಲ್ಲಿ ಒಂದು ನಿರ್ಣಯವಾಡಿದ ಮೇಲೆ ಆ ಒಂದು ತತ್ವ ನೀತಿ, ಧೋರಣೆಯ ಕ್ರಮವನ್ನು ಸರಿಸಿ ಆಗದೇ ಒಂದು ಅಂತ್ಯ ತೀರ್ಮಾನವನ್ನು ಮಾಡಿದ್ದೆವು. ಆ ರೀತಿ ಮಾಡಿದನಂತರ ಪದೇ ಪದೇ ಈ ರೀತಿ ಪುನಃ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ಇವತ್ತು ಬೆಳಗಾಂ ಭಾಗದ ಕನ್ನಡ ಪ್ರದೇಶಗಳು ಮಹಾರಾಷ್ಟ್ರಕ್ಕೆ ಬಿಟ್ಟುಕೊಟ್ಟರೆ ಕನ್ನಡ ರಾಜ್ಯದಲ್ಲಿ ಕೆಲವರು ಬೆಂಗಳೂರಿನಲ್ಲಿನ ಆಂಧ್ರರು ನಮ್ಮನ್ನು ತೆಲುಗು ಪ್ರಾಂತಕ್ಕೆ ಬಿಡಿ ಎಂದು ಕೇಳಬಹುದು. ದಿನದಿನವೂ ಹೀಗೆ ಒಂದೊಂದು ಗುಂಪಿನವರೂ ಕೇಳುತ್ತಾ ಬರಬಹುದು. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಬೇಕಾದಷ್ಟು ಗಮನಕೊಟ್ಟು ಸಾಕಷ್ಟು ಅಧ್ಯಯನಮಾಡಿ ನಮಗೆ ಬರಬೇಕಾದ ಪ್ರಾಂತಗಳು ಬಂದೇ ಬರುತ್ತವೆಂಬುದನ್ನು ನಿರ್ಣಯಮಾಡಬೇಕು. ಆಗ ಮಾತ್ರ ಸಿದ್ಧವಾಗಿದ್ದರೆ ಸಾಕು. ಆದ್ದರಿಂದ ಈಗ ಈ ನಿರ್ಣಯ ಸಕಾಲಿಕವಾಗಿಲ್ಲ ಮತ್ತು ಅನುಕೂಲವಾಗಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† Sri L. B. BIRJE (Khanapur).—

(Spoke in Marathi)

† ಶ್ರೀ ಎ. ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೆ, ಸ್ವಾಮಿ, ಭಾಷಾವಾರು ತಳಹದಿಯ ಮೇಲೆ ನಮ್ಮ ರಾಷ್ಟ್ರದಲ್ಲಿ ಪ್ರಾಂತಗಳ ರಚನೆಯಾದ ಮೇಲೆ ಗಡಿ ವಿವಾದದ ವಿಷಯವಾಗಿ ಒಂದು ಖಾನಗಿ ಗೊತ್ತುವಳಿ ಈ ದಿನ ನಮ್ಮ ಮುಂದೆ ಚರ್ಚೆಗೆ ಬಂದಿದೆ. ಈ ಗೊತ್ತುವಳಿ ಬಗ್ಗೆ ಒಂದು ಮುಖ್ಯ ವಿಚಾರವನ್ನು ನಾವು ಗಮನಿಸಬೇಕಾಗಿದೆ. ಯಾವ ಆಧಾರದ ಮೇಲೆ, ಯಾವ ಆಂಕ ಅಂಶಗಳ ಮೇಲೆ, ಯಾವ ವಿಚಾರ ತತ್ವಗಳ ಮೇಲೆ ನಮ್ಮ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮಾನ್ಯಸದಸ್ಯರು ಇದನ್ನು ತಂದಿದ್ದಾರೆ ಎನ್ನುವುದು ಇದುವರೆಗೂ ಅರ್ಥವಾಗಿಲ್ಲ. ಈಗ ಒಂದು ವಿಷಯವನ್ನು ಈ ಸಂಬಂಧವಾಗಿ ವಿಚಾರ ಮಾಡುವುದಾದರೆ, ಭಾಷಾವಾರು ತಳಹದಿಯ ಮೇಲೆ ಪ್ರಾಂತರಚನೆಯಾದದ್ದು ಕೇವಲ ಮಹಾರಾಷ್ಟ್ರದವರು, ಕನ್ನಡಿಗರು, ಆಂಧ್ರರು ಮತ್ತೆ ಕೆಲವು ಪ್ರಾಂತಾಭಿಮಾನಿಗಳು ಪ್ರಯತ್ನ ಮಾಡಿದ್ದರಿಂದಷ್ಟೇ ಅಲ್ಲ, ಇಡೀ ಭಾರತದ ಜನರು ಮೊದಲೇ ಮಹಾತ್ಮಾಜಿಯವರ ಕಾಲದಲ್ಲಿ ಕಾಂಗ್ರೆಸ್‌ನವರು ತೆಗೆದುಕೊಂಡ ಗೊತ್ತುವಳಿಯ ಆಧಾರದ ಮೇಲೆ ಅದು ನಮ್ಮ ರಾಷ್ಟ್ರ ಸ್ವಾತಂತ್ರ್ಯ ಪಡೆದಮೇಲೆ ಹಿಂದಿನ ಆ ಗೊತ್ತುವಳಿಯ ಪ್ರಕಾರ ನಡೆಯಲಿಪುದಕ್ಕಾಗಿ ಈ ರಾಷ್ಟ್ರದ ಜನತೆಯ ಅಭಿಪ್ರಾಯದ ಮೇಲೆ ಪ್ರಾಂತ ಪುನರ್ವಿಂಗಡಣೆಯಾಗಿದೆ. ಹೀಗೆ ಪುನರ್ರಚನೆ ಮಾಡುವುದರಲ್ಲಿ ಅಲ್ಲಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿರಬಹುದು. ಈ ದಿನ ಅನೇಕ ಕನ್ನಡಿಗರು ಗ್ರಾಮಗಳು ಆಂಧ್ರದಲ್ಲಿ, ಮದರಾಸಿನಲ್ಲಿ, ಕೇರಳದಲ್ಲಿರಬಹುದು. ಇದೇ ರೀತಿ ಮಹಾರಾಷ್ಟ್ರ ಭಾಷೆಯನ್ನಾಡತಕ್ಕ ಜನತೆ, ತಮಿಳು ಭಾಷೆಯನ್ನಾಡತಕ್ಕ ಜನತೆ ಮೈಸೂರಿನಲ್ಲಿ—ಕರ್ನಾಟಕದಲ್ಲಿ ಇರಬಹುದು. ಭಾಷೆಯ ತಳಹದಿಯ ಮೇಲೆ ಪ್ರಾಂತಗಳನ್ನು ಕಟ್ಟಿದರೆ

ರಾಷ್ಟ್ರಕ್ಕೆ ಬಹಳ ಅಹಿತಕಾರಿ ಎಂದು ಕೆಲವರು ಹೇಳಬಹುದು. ಇದರಲ್ಲಿ ಅನೇಕ ವಿಷಯಗಳನ್ನು ತಿಳಿದುಕೊಂಡು ಅವುಗಳ ಮೇಲೆ ಯೋಚಿಸಿ ದೂರದೃಷ್ಟಿಯಿಂದ ನೋಡಿ ನಮ್ಮ ರಾಷ್ಟ್ರದ ಐಕ್ಯತೆಗೆ ಧಕ್ಕೆಬಾರದಂತೆ ನೋಡಿಕೊಂಡು ಗಡಿಸಮಸ್ಯೆಗಳನ್ನು ವಿವೇಕದಿಂದ ಬಗೆಹರಿಸುವ ಪ್ರಯತ್ನ ಮಾಡಬೇಕೇ ಹೊರತು ಇಂತಹ ಮಾನ್ಯ ಸಭೆಯಲ್ಲಿ, ಇಂತಹ ಒಂದು ವಿಷಯದ ಬಗ್ಗೆ ಚರ್ಚೆಗೆ ಆನ್ನದ ಕೊಟ್ಟು ಇದರಿಂದ ಅನೇಕ ಸದಸ್ಯರ ಮನಸ್ಸಿನಲ್ಲಿ ಕಳವಳವನ್ನುಂಟುಮಾಡುವುದು ಉಚಿತ ವಲ್ಲ. ಅಲ್ಲದೆ ಈ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಅನಾವಶ್ಯಕವಾದ ವಿಷಯಗಳ ಬಗ್ಗೆ ಮಾತನಾಡಿ ಕಾಲಹರಣ ಮಾಡುವುದು ಸೂಕ್ತವಲ್ಲ. ಮುಖ್ಯ ವಿಷಯಗಳ ಚರ್ಚೆಮಾಡುವುದು ಸೂಕ್ತವೆಂದು ಹೇಳಿದರೂ ಕೂಡ ಈ ಸಮಯದಲ್ಲಿ ಈ ನಿರ್ಣಯದ ಬಗ್ಗೆ ಈ ಸಭೆ ಯಾವ ತೀರ್ಮಾನವನ್ನು ತೆಗೆದು ಕೊಳ್ಳುವುದೂ ಸೂಕ್ತವಲ್ಲ. ಏಕೆಂದರೆ ಈ ವಿಷಯ ಅಷ್ಟು ಕಠಿಣವಾದುದು ಮತ್ತು ಪರಿಸ್ಥಿತಿ ಕೂಡ ಸರಿಯಾಗಿಲ್ಲ. ನಾವು ಯಾವ ರೀತಿಯಾದರೂ ಶಾಂತಿಯಿಂದಲೇ ಪ್ರೀತಿಯಿಂದಲೇ ಇದನ್ನು ಬಗೆಹರಿಸಿಕೊಳ್ಳಬಹುದು. ಈ ಹೊತ್ತು ಒಬ್ಬ ಪ್ರಜೆ ಯಾವ ಪ್ರಾಂತದವನೇ ಇರಲಿ, ಆತನ ಭಾಷೆ, ಕನ್ನಡವಾಗಿರಲಿ, ಮರಾಠಿಯಾಗಿರಲಿ ಕೆಲವು ದಿವಸಗಳ ಮೇಲೆ ಆತನು ಬೇರೆ ಭಾಷೆಯನ್ನು ಕಲಿಯ ಬಹುದು. ಕನ್ನಡದವನು ಮರಾಠಿ ಕಲಿಯಬಹುದು ಮರಾಠಿಯವನು ಕನ್ನಡ ಕಲಿಯಬಹುದು. ಮೈಸೂರು ರಾಜ್ಯದಲ್ಲಿ ಮಹಾರಾಷ್ಟ್ರದ ಒಂದು ಭಾಗವಿದ್ದರೆ ಮರಾಠಿ ಆಡಳಿತಕ್ಕೆ ಆ ಜನ ಇಪ್ಪತ್ತು ವರ್ಷಗಳ ಮೇಲೆ ಕನ್ನಡ ಆಡುವುದಕ್ಕೆ ಬರಬಹುದು. ಇಂತಹ ವಿಷಯವನ್ನೆತ್ತಿ ದೇಶದ ಐಕ್ಯತೆಗೆ ಧಕ್ಕೆ ತರಬಾರದೆಂದು ಈ ಮಾನ್ಯಸದಸ್ಯರಲ್ಲಿ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಇದು ಕೇವಲ ಮಹಾರಾಷ್ಟ್ರ ಮತ್ತು ಮೈಸೂರು ಗಡಿಗಳಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ ಆಂಧ್ರ ಮತ್ತು ಕೇರಳ ರಾಜ್ಯಗಳ ಜೊತೆಗೂ ನಮಾಲೋಚಿಸಿ ಈ ಪ್ರಶ್ನೆಯನ್ನು ಬಗೆಹರಿಸಬೇಕಾಗಿದೆ. ಮಹಾರಾಷ್ಟ್ರದಲ್ಲಿರುವ ಸಾಂಗ್ಲಿ, ಮಿರಜಿ, ಕೊಲ್ಹಾಪುರ, ಅಕ್ಕಲಕೋಟೆ ಈ ಪ್ರದೇಶದಲ್ಲಿ ಕನ್ನಡಿಗರಿದ್ದಾರೆ, ಆಂಧ್ರ ರಾಜ್ಯದ ಮಹಬೂಬ್‌ನಗರ, ಆಲೂರು, ಆದವಾನಿ, ರಾಯದುರ್ಗ ಮತ್ತು ಮಡಕಶಿರ ಇವುಗಳಲ್ಲಿ ಹೆಚ್ಚು ಕನ್ನಡಿಗರಿದ್ದಾರೆ. ಅವರು ಏಕೆ ಕನ್ನಡಿಗರಾದ ತಾವು ಇಲ್ಲಿಗೆ ಸೇರಬಾರದೆಂದು ವಾದ ಮಾಡಬಹುದು. ಮಹಾರಾಷ್ಟ್ರದ ಕೆಲವೊಂದು ಜನತೆ ಮೈಸೂರು ರಾಜ್ಯದಲ್ಲಿ ಸೇರಿದ್ದರೆ ಅವರಿಗೇನು ಹಾನಿಯಾಗಿದೆ? ಇದರಿಂದ ದೇಶಕ್ಕೆ ಮತ್ತು ರಾಷ್ಟ್ರಕ್ಕೆ ಏನು ತೊಂದರೆಯಾಗಿದೆ ಎನ್ನುವುದನ್ನು ಮಾನ್ಯಸದಸ್ಯರು ನಮಗೆ ತಿಳಿಪಳಿಕೆ ಕೊಡಬೇಕಾಗಿತ್ತು. ಅದು ಬಿಟ್ಟು ಕೇವಲ ಪೊಲಿಟಿಕಲ್ ಸ್ಟಂಟ್ ಅಥವಾ ರಾಜಕೀಯ ತಂತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ವಾದವನ್ನು ಬೆಳೆಸುತ್ತಿದ್ದಾರೆ. ಪ್ರಜಾಸತ್ತಾತ್ಮಕವಾದ ರಾಜ್ಯದಲ್ಲಿ ಮಾತನಾಡಲು ಅವಕಾಶ ಮತ್ತು ಅಧಿಕಾರವಿವೆ ಎಂದು ಗೊತ್ತಿದ್ದರೂ ಕೂಡ ಅಧಿಕಾರವಾಣಿಯಿಂದ ಯಾವ ಇಂತಹ ವಿಷಯ ವನ್ನಾಡುವುದಕ್ಕೆ ಹೋದರೂ ದೇಶಕ್ಕೂ ಹಿತವಲ್ಲ ರಾಷ್ಟ್ರಕ್ಕೂ ಹಿತವಲ್ಲ. ಇದರಿಂದ ಜನತೆಯ ನಮಾಧಾನ, ಸಂಸ್ಕೃತಿ ಮತ್ತು ಭಾಷೆಗೆ ಒಳ್ಳೆಯದು ಮಾಡಿದಂತಾಗುವುದಿಲ್ಲ, ಆತಂಕಿತ ವಹಿಸಿ ಕೊಂಡಿರುವವರು ಈ ದಿವಸ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಕೇವಲ ಗಡಿ ಪ್ರದೇಶದ ಬಗ್ಗೆ ಗಮನಕೊಡಬೇಕಾಗಿಲ್ಲ. ಮಹಾರಾಷ್ಟ್ರ, ಕನ್ನಡ ಮತ್ತು ಆಂಧ್ರ ರಾಜ್ಯಗಳಾದರೇನು ಇವೇನೂ ನಮ್ಮ ರಾಷ್ಟ್ರದ ಗಡಿಗಳಲ್ಲ. ಇಂತಹ ಗಡಿಗಳನ್ನು ಮಾಡಬೇಕೆಂದು ನಾವು ಸ್ವಾತಂತ್ರ್ಯ ಕ್ಕಾಗಿ ಹೋರಾಟ ಮಾಡಲಿಲ್ಲ. ಭಾರತಾತ್ಯಂತ ಒಂದೇ ರಾಜ್ಯವೆಂಬ ಭಾವನೆಯಿಂದ ಹೋರಾಟ ನಡೆಸಿದೆವು. ಒಂದೇ ರಾಜ್ಯಕ್ಕೆ ಅಂಟಿಕೊಂಡು, ಸ್ವಾತಂತ್ರ್ಯ ಪಡೆಯಬೇಕೆಂದು ನಾವು ಪ್ರಯತ್ನ ಪಡಲಿಲ್ಲ; ಒಂದೇ ರಾಷ್ಟ್ರವೆಂಬ ಭಾವನೆಯಿಂದ ಪಡೆದೆವು. ಗಡಿ ಪ್ರಶ್ನೆ ನಿಜವಾಗಿ ಇರುವುದು ಚೈನಾ ಮತ್ತು ಭಾರತ, ಹಾಗೂ ಪಾಕಿಸ್ತಾನ ಭಾರತ ಇವುಗಳ ನಡುವೆ ಇಂಥ ಸಂದರ್ಭದಲ್ಲಿ ದೇಶದ ಹಿತ ದೃಷ್ಟಿಯಿಂದ ದೇಶದ ಐಕ್ಯತೆಗೆ ಚ್ಯುತಿ ಬಾರದಂತೆ ಮಾಡುವುದು ನಮ್ಮ ಎಲ್ಲರ ಕರ್ತವ್ಯ ವಾಗಿದೆ. ಆದುದರಿಂದ ಈ ಪರಿಸ್ಥಿತಿಯಲ್ಲಿ ಈ ನಿರ್ಣಯವನ್ನು ದೇಶದ ಹಿತ ದೃಷ್ಟಿಯಿಂದ ಶ್ರೀ ಪಾಟೀಲರವರು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದನ್ನು ಮಾನ್ಯ ಸಭೆಗೆ ಕೂಡ ಕಳಕಳಿಯಿಂದ ಹಾಗು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಂಡು ನನ್ನ ಈ ಎರಡು ಮಾತು ಮುಗಿಸುವುದಕ್ಕೆ ಮೊದಲು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

[MR. CHAIRMAN (SRI S. M. GURADDI) in the Chair.]

† ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರಾದ ಶ್ರೀ ವಿ. ಎಸ್. ಪಾಟೀಲ್‌ರವರು ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ನಿರ್ಣಯವನ್ನು ಈಗಾಗಲೇ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ವಿಷಯದಲ್ಲಿ ಮುಖ್ಯವಾಗಿ ಸರಕಾರದವರು ಮನಗಾಣ ಬೇಕಾದ ಅಂಶವೇನೆಂದರೆ ಕನ್ನಡ ರಾಜ್ಯ ಏಪರ್ಾಡಾಗಿ ಎಂಟು ವರ್ಷವಾದರೂ ಕೂಡ ಸಂಬಂಧ

(ಶ್ರೀ ಎಸ್. ಗೋಪಾಲ ಗೌಡ)

ಪಟ್ಟ ಗಡಿ ಪ್ರದೇಶದಲ್ಲಿರುವ ಕನ್ನಡ ಭಾಗಗಳನ್ನು ಇನ್ನೂ ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳದೇ ಇರುವ ವಿಷಯದಲ್ಲಿ ಕಾಲ ವಿಳಂಬವಾಗುವುದರಿಂದ ಆಯಾಯ ಭಾಗದಲ್ಲಿರತಕ್ಕಂಥ ಕನ್ನಡ ಜನರಿಗೆ ಹೆಚ್ಚಿನ ಹಾನಿ ಉಂಟಾಗಿದೆ ಎನ್ನತಕ್ಕಂಥ ವಿಷಯ. ಭಾಷಾವಾರು ಪ್ರಾಂತಗಳು ಭಾಷೆಯ ಆಧಾರದ ಮೇಲೆ ರಚಿಸುವ ಏರ್ಪಾಡಾಗಬೇಕು ಎನ್ನತಕ್ಕಂಥ ಒಂದು ಅಭಿಪ್ರಾಯ ಸುಮಾರು 1920ರ ಹೊತ್ತಿಗೆ ಈ ದೇಶದಲ್ಲಿ ಮೂಡಿ ಬಂದಿದೆ. ಮಹಾತ್ಮಾ ಗಾಂಧೀಜಿಯವರು ನಾಗಪುರ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸ್ ಸಂಸ್ಥೆಯ ಸಂಘಟನೆಗಾಗಿ ಇದನ್ನು ಉಪಯೋಗಿಸುವುದಕ್ಕೆ ಭಾಷಾವಾರು ಪ್ರಾಂತ ರಚನೆ ಭಾಷೆಯ ಆಧಾರದ ಮೇಲೆ ಮಾಡಬೇಕೆಂದು ತೀರ್ಮಾನಕ್ಕೆ ಬಂದರು. ಇದಕ್ಕೆ ಕಾರಣವೇನೆಂದರೆ ಈ ದೇಶದ ರಾಜ್ಯಗಳು ರಾಜಕೀಯ ತುಳಿತಕ್ಕೆ ಸಿಕ್ಕಿ ಕೃತಕವಾಗಿ ರಾಜ್ಯಗಳು ಏರ್ಪಾಡಾಗಿದ್ದವು. ಈ ರಾಜ್ಯಗಳಿಗೆ ಯಾವುದೇ ಒಂದು ವೈಚಾರಿಕ ಹಿನ್ನೆಲೆ ಇರಲಿಲ್ಲ. ಆದುದರಿಂದ ಸ್ವಾತಂತ್ರ್ಯ ಬೇಡಿಕೆಯ ಜೊತೆಗೆ ರಾಜ್ಯಗಳ ಪುನರ್ನಿರ್ಮಾಣ ಭಾಷೆಯ ಆಧಾರದ ಮೇಲೆ ನಡೆಯಬೇಕು ಎಂಬ ವಿಷಯ ಸಾಮಾನ್ಯವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಎಲ್ಲರ ಅಭಿಪ್ರಾಯವಾಗಿತ್ತು. ಎಲ್ಲ ರಾಜ್ಯಗಳ ಎಲ್ಲ ಭಾಷೆಯ ಜನರ ಅಭಿಪ್ರಾಯ ಈ ರೀತಿಯಾಗಿತ್ತು ಎಂಬುದನ್ನು ಕಂಡುಕೊಳ್ಳಬಹುದು. ಈ ಸಂದರ್ಭದಲ್ಲಿ ಇದಕ್ಕಾಗಿ ಅನೇಕ ಸಮಿತಿಗಳು ಏರ್ಪಾಡಾಗಿದ್ದುವು. ಇದಲ್ಲದೆ ಯಾವ ಯಾವ ರಾಜ್ಯವನ್ನು ಹೇಗೆ ನಿರ್ಮಾಣ ಮಾಡಬೇಕು ಎಂಬುದಕ್ಕೆ ಕೂಡ ಸಾಕಷ್ಟು ಆಂದೋಲನ ಚರ್ಚೆ ನಡೆದು ಇವತ್ತಿನ ದಿವಸ ರಾಷ್ಟ್ರದಲ್ಲಿ ಈ ಭಾಷೆಯ ಆಧಾರದ ಮೇಲೆ ರಾಜ್ಯ ನಿರ್ಮಾಣ ಮಾಡತಕ್ಕಂಥ ಕೆಲಸ ಬಹುಮಟ್ಟಿಗೆ ಪೂರ್ತಿಯಾಗಿದೆ ಎಂದು ಹೇಳಬಹುದು. ರಾಜ್ಯ ಪುನರ್ವಿಂಗಡಣ ಆಯೋಗದವರು ಕೊಟ್ಟ ಒಂದು ವರದಿಯ ಆಧಾರದ ಮೇಲೆ ಕೇಂದ್ರ ಸರಕಾರದವರು ಒಂದು ಕಾನೂನು ರಚನೆ ಮಾಡಿದರು ಮತ್ತು ಆ ವಿಧೇಯಕದ ಆಧಾರದ ಮೇಲೆ ಕರ್ನಾಟಕ ರಾಜ್ಯ ಏರ್ಪಾಡು ಆಯಿತು. ಆದರೆ ಈ ಕನ್ನಡ ರಾಜ್ಯ ಏರ್ಪಾಡಾಗುವಾಗ್ಗೆ ಕೆಲವು ಕನ್ನಡ ಭಾಗಗಳು ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಅಂಥ ಭಾಗಗಳು ಬೇರೆ ರಾಜ್ಯದಲ್ಲಿ ಕಾರಣಾಂತರದಿಂದ ಉಳಿದು ಹೋದವು. ಈ ವಿಷಯದಲ್ಲಿ ಈಗಾಗಲೇ ಈ ಪ್ರದೇಶ ಕರ್ನಾಟಕಕ್ಕೆ ಸೇರಬೇಕು ಎಂದು ಹೇಳಿ ಹೊರಗಡೆ ಉಳಿದಿರತಕ್ಕಂಥವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉದಾಹರಣೆಗಾಗಿ ಕಾಸರಗೋಡು ಎಂದು ಹೇಳಬಹುದು. ಈಚೆಗೆ ಕಾಸರಗೋಡಿನಲ್ಲಿ ಈ ಬಗ್ಗೆ ಒಂದು ಸಮ್ಮೇಳನ ಸಹ ಮಾಡಿದರು. ಕಾಸರಗೋಡು ಕೇರಳ ರಾಜ್ಯದಲ್ಲಿ ಸೇರಿ ಹೋಗಿದೆ. ಈ ಒಂದು ಭಾಗವನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳುವ ಬಗ್ಗೆ ನಮ್ಮ ಸರಕಾರ ಹಾಗೂ ಕೇಂದ್ರ ಸರಕಾರ ಸೂಕ್ತ ಕಾರ್ಯಕ್ರಮವನ್ನು ಬೇಗ ತೆಗೆದುಕೊಳ್ಳಬೇಕಾದುದು ಅತ್ಯಗತ್ಯ. ತಾಳಪಾಡಿ ಫಿರ್ಕಾ ಬಗ್ಗೆ ಸಹ ಈ ಮಾತು ಹೇಳಬೇಕಾಗುತ್ತದೆ. ಮಡಕಸಿರ ಆಂಧ್ರದಲ್ಲಿ ಸೇರಿದೆ. ಅಕ್ಕಲಕೋಟೆ ಮಹಾರಾಷ್ಟ್ರದಲ್ಲಿ ಸೇರಿದೆ. ಗಡಿ ಉದ್ದಕ್ಕೂ ಕರ್ನಾಟಕದಿಂದ ಹರಿದುಹೋಗಿ ಎಷ್ಟೋ ಗ್ರಾಮಗಳು ಎಷ್ಟೋ ಭಾಗಗಳು ಬೇರೆ ರಾಜ್ಯದಲ್ಲಿ ಉಳಿದು ಹೋಗಿವೆ. ಈ ಭಾಗಗಳನ್ನು ಕರ್ನಾಟಕ ರಾಜ್ಯದಲ್ಲಿ ಸೇರಿಸುವುದಕ್ಕೆ ಗಡಿಗೆ ಸಂಬಂಧಪಟ್ಟ ಟ್ರಿಬ್ಯೂನಲ್ ರಚನೆಮಾಡಿ ಅದಕ್ಕೆ ಈ ಕೆಲಸ ವಹಿಸುವುದು ಬಹಳ ಸೂಕ್ತ. ಈ ಕೆಲಸ ಬಹಳ ಜಾಗ್ರತೆಯಾಗಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲು ಬಯಸುತ್ತೇನೆ. ಕೇಂದ್ರ ಹಾಗು ರಾಜ್ಯ ಸರಕಾರದವರು ತುರ್ತು ಪರಿಸ್ಥಿತಿ ಮುಂದೆಮಾಡಿ ಈ ಒಂದು ಸಮಸ್ಯೆಯನ್ನು ಈಗ ಕೈಗೆ ಎತ್ತಿಕೊಳ್ಳುವುದರಿಂದ ಜನರ ದೃಷ್ಟಿ ಬೇರೆಕಡೆ ಹರಿಯುತ್ತದೆ ಎಂದು ಹೇಳಿದ್ದಾರೆ. ಆದರೆ ಚೀಣಾ ಆಕ್ರಮಣ ನಡೆದು ಉಂಟಾದ ತುರ್ತು ಪರಿಸ್ಥಿತಿ ವಾಸ್ತವವಾಗಿ ಈಗ ಇಲ್ಲದಂತಾಗಿದೆ. ಈ ತುರ್ತು ಪರಿಸ್ಥಿತಿಯ ನೆಪ ಕಾರಣ ಮುಂದೊಡ್ಡಿ ಇಂಥ ಜ್ವಲಂತ ಸಮಸ್ಯೆಯನ್ನು ಪರಿಹರಿಸದೆ ಮುಂದೆ ಹಾಕುವುದರಿಂದ ಅನುಕೂಲಕ್ಕಿಂತ ಹಾನಿಯೇ ಜಾಸ್ತಿ ಇದೆ ಎಂದು ಹೇಳಬಯಸುತ್ತೇನೆ. ರಾಜ್ಯ ಪುನರ್ವಿಂಗಡಣ ಆಯೋಗದವರು ಗಡಿಗಳ ಹೊಂದಾಣಿಕೆಯ ವಿಷಯದಲ್ಲಿ ಭಿನ್ನಾಭಿಪ್ರಾಯ ಇದ್ದಭಾಗದಲ್ಲಿ ಅಂಥ ವ್ಯಾಜ್ಯವನ್ನು ಟ್ರಿಬ್ಯೂನಲ್‌ಗೆ ವಹಿಸಬೇಕು ಎಂದು ಸಲಹೆ ಕೊಟ್ಟಿದ್ದರು. ಅದನ್ನು ನಮ್ಮ ರಾಜ್ಯ ಸರಕಾರವು ಪುರಸ್ಕರಿಸಲಿಲ್ಲ. ಗಡಿ ಹೊಂದಾಣಿಕೆಯ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಒಂದು ಕ್ರಮ ಬಹಳ ಒತ್ತಾಯದ ನಂತರ ಮಹಾರಾಷ್ಟ್ರ ಕರ್ನಾಟಕ ಗಡಿ ವಿಷಯದಲ್ಲಿ ಮೈಸೂರು ಸರಕಾರದವರು ತೆಗೆದುಕೊಂಡರು. ಶ್ರೀ ಜತ್ತಿ ಅವರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ್ಗೆ, ಶ್ರೀ ಚವಾಣ ಅವರು ಮಹಾರಾಷ್ಟ್ರದ ಮುಖ್ಯ ಮಂತ್ರಿಯವರಾಗಿದ್ದಾಗ್ಗೆ ನಾಲ್ಕು ಜನರ ಒಂದು ಗಡಿ ಸಮಿತಿ ಎಂದು ನೇಮಕ ಮಾಡಿದರು. ಮಹಾರಾಷ್ಟ್ರ ರಾಜ್ಯದ ಸದಸ್ಯರಾಗಿ ಶ್ರೀ ಎಚ್. ವಿ. ಪಾಟಸ್ಕರ್ ಮತ್ತು ಶ್ರೀ ಎಂ. ಡಿ. ಭಟ್ ಅವರನ್ನು ಅವರು ನಾಮಕರಣ ಮಾಡಿದರು. ನಮ್ಮ ಮೈಸೂರು ರಾಜ್ಯದ ಪರವಾಗಿ ಶ್ರೀ ಎಸ್. ಚನ್ನಯ್ಯ ಹಾಗೆ

ಶ್ರೀ ಎಸ್. ಎಸ್. ಮುಳೀಮಠ ಅವರನ್ನು ಸದಸ್ಯರನ್ನಾಗಿ ನಾಮಕರಣ ಮಾಡಿ ರು. ಈ ಗಡಿ ಸಮಿತಿ 30-11-1960ರಲ್ಲಿ ನೇಮಕವಾಯಿತು. ಈ ಸಮಿತಿಯವರು ಗಡಿ ಭಾಗಗಳಲ್ಲಿ ಪ್ರವಾಸ ಮಾಡಿ ಅನೇಕ ಸಲ ಪರಿಶೀಲನೆ ಮಾಡಿದ್ದಾರೆ. ನಂತರದಲ್ಲಿ ನಮ್ಮ ಸದಸ್ಯರು ಕೊಟ್ಟವರದಿಯನ್ನು ಇನ್ನೂ ಸರಕಾರದವರು ಪ್ರಕಟಿಸಿಲ್ಲ. ಆದರೆ ಮಹಾರಾಷ್ಟ್ರ ಸರಕಾರದವರು ಪ್ರಕಟಮಾಡಿ ಈಗಾಗಲೇ ಎಲ್ಲಾ ಕಡೆ ಹಂಚಿದ್ದಾರೆ.

ಇಲ್ಲಿ ಮುಖ್ಯವಾಗಿ ಒಂದು ವಿಷಯವನ್ನು ನಾವು ಮನಗಾಣಬೇಕಾಗಿದೆ. ಅದೇನೆಂದರೆ, ಗಡಿಯಲ್ಲಿ ಹೊಂದಾಣಿಕೆಯಾಗಿ, ಕರ್ನಾಟಕದಿಂದ ಬೇರೆ ರಾಜ್ಯಗಳಿಗೆ ಹೋಗುವ ಭಾಗಗಳು, ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಭಾಗಗಳು ಎಷ್ಟಿವೆ, ಅವುಗಳನ್ನು ಹೊಂದಾಣಿಕೆಯಿಂದ ಹಂಚುವುದು ಸೂಕ್ತವೆ, ಅಗತ್ಯವೇ, ಅಪೇಕ್ಷಣೀಯವೆ ಅನ್ನತಕ್ಕಂಥ ವಿಷಯವನ್ನು ನಾವು ಪರಿಶೀಲನೆ ಮಾಡಿದರೆ ಅನೇಕ ಸಂದರ್ಭಗಳಲ್ಲಿ ಗಡಿ ಉದ್ದಕ್ಕೂ ಹೀಗೆ ಮಾಡತಕ್ಕಂಥಾದ್ದು ಅಪೇಕ್ಷಣೀಯ ಅಂತ ಹೇಳಿ ನಮಗೆ ಗೊತ್ತಾಗುತ್ತದೆ. ಅದಕ್ಕೆ ಕಾರಣಗಳಿವೆ. ಅಲ್ಲಿರತಕ್ಕಂಥ ಜನರು ಈಗಿರುವ ರಾಜ್ಯದ ಹೊರಗಡೆ ರಾಜ್ಯಕ್ಕೆ ಸೇರಬೇಕು ಅಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಭೌಗೋಳಿಕ ಸಮೀಪತೆಯನ್ನೂ ನಾವು ನೋಡಬೇಕಾಗಿದೆ; ಹಾಗೂ ಭಾಷಾ ಸಂಖ್ಯೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಯಾವ ಒಂದು ರಾಜ್ಯದ ಭಾಷೆಯನ್ನು ಮಾತನಾಡುತ್ತಿದ್ದಾರೆ ಎಂದು ನೋಡಬೇಕು. ಇವತ್ತು ಆ ಪ್ರಶ್ನೆ ಅಷ್ಟು ದೊಡ್ಡ ಪ್ರಶ್ನೆಯಲ್ಲ ಅದನ್ನು ಪದೇ ಪದೇ ಚರ್ಚಿಸುವುದರಿಂದ, ಅದನ್ನು ಎತ್ತಿ ಆಡುವುದರಿಂದ ಕ್ಷೇಮವಿಲ್ಲವೆಂತ ಯಾರಾದರೂ ಹೇಳುವುದಾದರೆ, ಅದು ಅಷ್ಟು ಸರಿಯಲ್ಲ. ಸಮಗ್ರ ಭಾರತದ ಐಕ್ಯತೆ ದೃಷ್ಟಿಯಿಂದ, ರಾಜ್ಯಗಳ ಬೆಳವಣಿಗೆ ಮತ್ತು ಐಕ್ಯತೆ ದೃಷ್ಟಿಯಿಂದ, ಸಣ್ಣಪುಟ್ಟ ಹೊಂದಾಣಿಕೆಗಳಲ್ಲಿ ಊರಿನ ಉದ್ದಕ್ಕೂ ಇರುವ ಸಮಸ್ಯೆ ಒಂದು ಬೃಹತ್ ಸಮಸ್ಯೆಯಾಗಿ, ಇಡೀ ದೇಶಕ್ಕೇ ಕಟುಪರಿಸ್ಥಿತಿ ಉಂಟಾಗುವುದಾದರೆ, ಆಗ ನಾವು ಆ ಒಂದು ಸಮಸ್ಯೆಯನ್ನು ಇವತ್ತು ಕೆದಕುವುದು ಸೂಕ್ತವಾದುದಲ್ಲ. ಆದರೆ ಅಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರದವರೂ, ರಾಜ್ಯ ಸರಕಾರಗಳ ಮುಖ್ಯ ಮಂತ್ರಿಗಳೂ ಮನಸ್ಸು ಮಾಡಬೇಕು. ಈ ಸಮಸ್ಯೆಯನ್ನು ಯಾವುದಾದರೂ ಒಂದು ಸೂಕ್ತ ರೀತಿಯಲ್ಲಿ ಬಗೆಹರಿಸಿಕೊಳ್ಳಬೇಕು. ಮತ್ತು ಮುಂದೆ ಸದಾಕಾಲಕ್ಕೂ ಈ ಗಡಿಗಳಲ್ಲಿ ವಾಸ ಮಾಡತಕ್ಕಂಥ ಜನರ ವಿಶ್ವಾಸ, ಸ್ನೇಹ, ಪ್ರೀತಿ ಇವು ಬೆಳೆದುಕೊಂಡು ಬರುವುದಕ್ಕೆ ಅವಕಾಶವಾಗತಕ್ಕಂಥ ಒಳ್ಳೆಯ ವಾತಾವರಣದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಅನ್ನುವುದನ್ನು ಮುಖ್ಯಸ್ಥರು ಮನಗಾಣಬೇಕಾಗಿದೆ. ಕಾರಣವೇನೆಂದರೆ, ಅವರು ಈ ವಿಷಯವನ್ನು ವಿಳಂಬಿಸಿಕೊಂಡು ಹೋಗುತ್ತಾ ಇದ್ದಾರೆ, ಮತ್ತು ಅವರ ಜವಾಬ್ದಾರಿಯನ್ನೂ, ಹೊಣೆಯನ್ನೂ ಹಾರಿಸಿಕೊಳ್ಳತಕ್ಕಂಥ ಮಾತನ್ನು ಆಡಿಕೊಂಡು ಬರುತ್ತಾ ಇದ್ದಾರೆ. ಮಾನ್ಯ ಸದಸ್ಯರೊಬ್ಬರು ಈಗ ಮಾತನಾಡುತ್ತಾ, ಈ ಸಮಸ್ಯೆಯನ್ನು ಅಷ್ಟು ದೊಡ್ಡದಾಗಿ ಮಾಡುವುದು ಉಚಿತವಲ್ಲವೆಂಬ ಅಭಿಪ್ರಾಯವನ್ನು ಸೂಚಿಸಿದರು. ನಿಜ. ದೊಡ್ಡ ವಿಷಯಗಳನ್ನು ಪ್ರಸ್ತಾಪ ಮಾಡುವಾಗ, ಚೀನಾದ ಆಕ್ರಮಣವನ್ನು ಪ್ರಸ್ತಾಪ ಮಾಡುವಾಗ, ದೇಶದಲ್ಲಿ ಅನ್ನ ಬಟ್ಟೆ ಸಮಸ್ಯೆಯನ್ನು ಮಾತನಾಡುವಾಗ ಅಥವ ದೇಶದ ಸಮಗ್ರ ಅಭಿವೃದ್ಧಿಯನ್ನು ಮಾತನಾಡುವಾಗ, ಹೊಂದಾಣಿಕೆ ವಿಷಯ ಸಣ್ಣದಾಗಿ ಕಾಣುತ್ತದೆ. ಆದರೆ ಆ ಭಾಗದಲ್ಲಿ ವಾಸಮಾಡತಕ್ಕಂಥ ಜನರ ದೈನಂದಿನ ಸಮಸ್ಯೆಗಳೂ ಏಡರು ತೊಡರುಗಳು ಮುಂತಾದುವನ್ನು ಗಣನೆಗೆ ತೆಗೆದುಕೊಂಡರೆ, ಆಗ ಆ ಸಮಸ್ಯೆಗಳಿಗೆ ಪರಿಹಾರ ನೀಡಬೇಕಾದ್ದು ಎಲ್ಲ ಸರಕಾರಗಳ ಕರ್ತವ್ಯ. ಉದಾಹರಣೆಗೆ ಕಾಸರಗೋಡಿನ ಮಕ್ಕಳ ವಿದ್ಯಾಭ್ಯಾಸ ತೆಗೆದುಕೊಳ್ಳೋಣ; ಅವರು ಯಾವ ಶಾಲೆಗೆ ಹೋಗಬೇಕು? ಮಂಗಳೂರು ಕಾಲೇಜಿಗೆ ಬಂದು ಸೇರಿಕೊಳ್ಳಿ ಎಂದು ಹೇಳಿದರೆ, ಅವರು ಅಲ್ಲಿಗೆ ಹೋಗುವುದು ಹೇಗೆ? ಈ ಸಮಸ್ಯೆ ಕಾದಿರುವುದಿಲ್ಲ. ಈ ವರ್ಷ ಸೇರಿಸಿಕೊಂಡರೆ ಉಂಟು, ಇಲ್ಲದಿದ್ದರೆ ಆ ಹುಡುಗರೆಲ್ಲಾ ವಿದ್ಯಾಭ್ಯಾಸ ಬಿಡಬೇಕು. ಈ ದೊಡ್ಡ ಅನಾನುಕೂಲತೆ ಇದೆ. ಅದಕ್ಕಾಗಿ ಮದ್ರಾಸಿಗೆ, ಅಥವಾ ಬೆಂಗಳೂರಿಗೆ ಅಥವಾ ಮುಂಬಯಿಗೆ ಹೋಗುವ ಸ್ಥಿತಿಯಲ್ಲಿ ಪ್ರತ್ಯಕ್ಷವಾಗಿ ಅನುಕೂಲಗಳು ಇರುವುದಿಲ್ಲ. ಇದು ವಿದ್ಯಾಭ್ಯಾಸದ ವಿಷಯ. ಇನ್ನು ಅಲ್ಲಿ ಆಡಳಿತದಲ್ಲ, ಈಗ ಕನ್ನಡ ಮಾತನಾಡತಕ್ಕಂಥ ಜನರು ಇರುವ ಕಡೆ, ಮಲಯಾಳಿ ಭಾಷೆಯಲ್ಲಿ ವೋಟರ್ಸ್ ಲಿಸ್ಟ್ ಆಗಲಿ, ಗ್ರಾಮಪಂಚಾಯಿತಿ ರೆಕಾರ್ಡುಗಳಾಗಲಿ, ನಕ್ಷೆ, ಚರ್ಚೆಗಳು ಎಲ್ಲವೂ ಬೇರೆ ಭಾಷೆಯಲ್ಲಿ ನಡೆಯುತ್ತಾ ಹೋದರೆ ಮಲಯಾಳಿಯನ್ನು ಕಲಿಯುವುದಕ್ಕೆ ಪ್ರಾರಂಭ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ತಮಗೆ ಏನೇನು ಅನಾನುಕೂಲತೆಗಳು ಆಗುತ್ತಿವೆಯೋ ಅವುಗಳನ್ನು ಸಹಿಸಿಕೊಂಡು ಇರಬೇಕು. ಇಂಥ ತೊಡರುಗಳನ್ನು ನೋಡಬೇಕು. ಕಾಸರಗೋಡು ಕರ್ನಾಟಕದಲ್ಲಿದ್ದರೆ, ಅವರಿಗೆ ಮಂಗಳೂರು ಜಿಲ್ಲೆ ಹತ್ತಿರವಾಗುತ್ತದೆ, ಅವರ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆ. ಆದರೆ ಇವತ್ತು ಆ ಜನರೆಲ್ಲರೂ ಪ್ರತಿಯೊಂದು ವಿಷಯಕ್ಕೂ ಕೇರಳ ರಾಜ್ಯಕ್ಕೆ ಹೋಗಬೇಕಾಗುತ್ತದೆ. ಅದರಿಂದ ಅವರಿಗೆ ಹೆಚ್ಚಿನ ಕಷ್ಟನಷ್ಟ ಉಂಟಾಗುತ್ತಿದೆ. ಈ ಒಂದು ಉದಾಹರಣೆಯಿಂದ, ಎಲ್ಲ ಭಾಗದಲ್ಲಿರತಕ್ಕಂಥ ಬೇರೆ ಭಾಷೆ ಆಡತಕ್ಕಂಥ ಜನರು ಬೇರೆ

(ಶ್ರೀ ಎಸ್. ಗೋಪಾಲಗೌಡ)

ರಾಜ್ಯದಲ್ಲಿ ಸೇರಿಹೋಗಿದ್ದರೆ, ಅವರ ಕಷ್ಟಗಳನ್ನು ಪರಿಗಣನೆಗೆ ತೆಗೆದುಕೊಂಡರೆ, ನಿಜವಾಗಿ ಅವರ ದೃಷ್ಟಿಯಿಂದ ಅದು ಬಹಳ ದೊಡ್ಡ ಸಮಸ್ಯೆ. ಅದಕ್ಕೆ ಜಾಗ್ರತೆಯಾಗಿ ಪರಿಹಾರವನ್ನು ಕೊಡ ಬೇಕಾದುದು ಆಯಾ ಸರಕಾರಗಳ ಕರ್ತವ್ಯ ಕೂಡ ಆಗುತ್ತದೆ.

ಇನ್ನು ಇಷ್ಟು ಹೇಳಿದ ಮೇಲೆ ನಾನು ಭಾಷಾವಾರು ಪ್ರಾಂತ್ಯಗಳ ರಚನೆ, ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳ ಪುನರ್ವಿಂಗಡಣೆಯಾಗಬೇಕು ಅಂತ ಮೊದಲಿನಿಂದಲೂ ವಾದ ಮಾಡಿ, ಅದಕ್ಕೆ ಸಾಕಷ್ಟು ಪ್ರಯತ್ನ ಮಾಡಿದವರಲ್ಲಿ ಒಬ್ಬ. ಅಂದಮಾತ್ರಕ್ಕೆ, ಯಾವುದೇ ಭಾಷೆಯ ಜನರು ಒಂದು ರಾಜ್ಯದಲ್ಲಿದ್ದರೆ, ಆ ಭಾಷೆಯನ್ನು ಆಡದೆ ಇರುವ ರಾಜ್ಯದಲ್ಲಿದ್ದರೆ, ಅವರನ್ನು ಅವರ ಭಾಷೆ ಮಾತನಾಡತಕ್ಕಂಥ ರಾಜ್ಯಕ್ಕೆ ಸಾಗಿಸಬೇಕು, exchange of population ಆಗಬೇಕೆಂದು ಯಾರಾದರೂ ವಾದ ಮಾಡಿದರೆ ಅದು ಮೂರ್ಖತನದ ವಾದ ಅಂತ ತ್ಯಜಿಸಬೇಕಾಗುತ್ತದೆ. ಈ ವಾದಗಳನ್ನು ರಾಜಿಕರ್ ಕಂಕ್ಲೂಷನ್ನಿಗೆ ಜನತೆ ತೆಗೆದುಕೊಂಡು ಹೋಗುವುದಾದರೆ, ಅಂಥ ವಾದ ಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಈ ರಾಜ್ಯದಲ್ಲಿ ಸುಮಾರು 61 ಭಾಷೆಗಳನ್ನು ಆಡುತ್ತಾ ಇದ್ದಾರೆ ಅಂತ ಹೇಳಿ ಅಂಕಿ ಅಂಶಗಳಿಂದ ನಮಗೆ ತಿಳಿಯುತ್ತದೆ. ಇದನ್ನು ನೋಡಿದ್ದಲ್ಲಿ, ಉರ್ದು ಭಾಷೆ ಮಾತನಾಡತಕ್ಕಂಥ ಜನರು ಈ ರಾಜ್ಯದಲ್ಲಿ ಬಹಳ ಇದ್ದಾರೆ; ತೆಲುಗು ಮಾತ ನಾಡತಕ್ಕಂಥವರೂ ಇದ್ದಾರೆ, ತಮಿಳು ಮಾತನಾಡತಕ್ಕಂಥವರೂ ಇದ್ದಾರೆ; ಮರಾಠಿ ಭಾಷೆಯನ್ನು ಮಾತನಾಡತಕ್ಕಂಥವರೂ ಇದ್ದಾರೆ; ತುಳು ಮತ್ತು ಕೂರ್ಗಿ ಭಾಷೆಯನ್ನೂ, ಕೊಂಕಣಿ ಭಾಷೆ ಯನ್ನು ಮಾತನಾಡುವ ಜನರಿದ್ದಾರೆ. ಇನ್ನೂ ಅನೇಕ ಸಣ್ಣಪುಟ್ಟ ಭಾಷೆಯನ್ನಾಡುವವರಿದ್ದಾರೆ. ಇಂಗ್ಲೀಷನ್ನು ಮಾತೃ ಭಾಷೆಯನ್ನಾಗಿ ಉಳ್ಳವರೂ ಇದ್ದಾರೆ. ಗುಜರಾತಿ ಭಾಷೆ ಮಾತನಾಡುವವ ರಿದ್ದಾರೆ. ಬೆಂಗಳೂರಿನಲ್ಲಿ ಬೆಂಗಾಳಿ ಮಾತನಾಡುವ ಜನರಿದ್ದಾರೆ. ಹಿಂದಿ ಮಾತನಾಡತಕ್ಕಂಥ ವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಈ ಒಂದು ಭಾಷಾ ಸಂಘಟಣೆ ಬಹುಶಃ ಭಾರತದ ಎಲ್ಲಾ ಭಾಗದಲ್ಲಿಯೂ ಇದೆ ಸಾಮಾನ್ಯವಾಗಿ ಎಂದು ಹೇಳಬಹುದು. ಮುಖ್ಯವಾಗಿ ಮದ್ರಾಸು, ಮುಂಬಯಿ, ಕಲ್ಕತ್ತ, ದೆಹಲಿ, ಅಹ್ಮದಾಬಾದ್, ಅಥವಾ ಇನ್ನು ಯಾವುದೇ ಅಂಥ ದೊಡ್ಡ ಪಟ್ಟಣ ಗಳನ್ನು ತೆಗೆದುಕೊಂಡರೆ, ಸಾಮಾನ್ಯವಾಗಿ ಭಾರತದ ಎಲ್ಲಾ ಭಾಷೆಗಳನ್ನೂ ಆಡುವ ಜನತೆಯನ್ನು ನಾವು ಅಲ್ಲಿ ನೋಡಬಹುದು. ಹಾಗೆಯೇ ವಿಶಿಷ್ಟವಾದ ಕೆಲವು ಉದ್ಯೋಗವನ್ನು, ದಂಧೆಗಳನ್ನು, ಕಸುಬುಗಳನ್ನು ಅವಲಂಬಿಸಿ ಕೆಲವು ಭಾಷೆಗಳನ್ನು ಮಾತನಾಡುವ ಜನರು ಬೇರೆ ರಾಜ್ಯಗಳಲ್ಲಿ ಹೋಗಿ ನೆಲಸಿರುವುದನ್ನು ನಾವು ನೋಡಬಹುದು. ಬಹಳ ಕಟ್ಟುನಿಟ್ಟಾಗಿ ಪ್ರತ್ಯೇಕ ಭಾಷೆಯನ್ನು ಮಾತನಾಡತಕ್ಕಂಥ ಜನರ ಸಂಖ್ಯೆಯನ್ನು ನಾವು ನಿರ್ಧರವಾಗಿಟ್ಟುಕೊಂಡು, ಗೆರೆಗಳನ್ನು ಎಳೆದು, ಆಯಾ ಭಾಷೆಗಳ ಜನರು ಇದೇ ಚೌಕಟ್ಟಿನಲ್ಲಿ ಬರಬೇಕು ಅನ್ನತಕ್ಕಂಥ ವ್ಯವಸ್ಥೆಯನ್ನು ದೇಶದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗೆ ಮಾತನಾಡುವುದುಕೂಡ ಬಹಳ ಅಹಿತವಾದ ಮಾತಾಗುತ್ತದೆ.

ಆದ್ದರಿಂದ ನಾವು ಪರಭಾಷೆಯ ಬಗ್ಗೆ ಸಹಿಷ್ಣುತೆ ಹಾಗೂ ಅಂತಹ ಭಾಷೆಯನ್ನು ಮಾತ ನಾಡತಕ್ಕ ಜನರು ಯಾವುದಾದರೂ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರಾಗಿದ್ದರೆ ಅವರಿಗೆ ಏನು ರಕ್ಷಣೆ ಕೊಡಬೇಕೋ, ಅವರ ಭಾಷೆ ಉಪಯೋಗಕ್ಕೆ ಬಂದು ಅವರ ಭಾಷೆಯಲ್ಲಿ ವ್ಯವಹಾರಕ್ಕೆ ಅನುಕೂಲವಾಗುವಂತಹ ರಕ್ಷಣೆ ಏನು ಕೊಡಬೇಕೋ ಅದನ್ನು ಕೊಡಬೇಕೆಂದು ನಾನು ಭಾವಿಸುತ್ತೇನೆ. ಅದನ್ನು ನಿರ್ವಿವಾದವಾಗಿ ಕೊಡಬೇಕಾದ್ದು ಅಗತ್ಯ ಮತ್ತು ಕರ್ತವ್ಯವು ಕೂಡ ಆಗುತ್ತದೆ ಇದನ್ನು ಎಲ್ಲಾ ಅಲ್ಪ ಸಂಖ್ಯಾತರು ಕೇಳುವುದಕ್ಕೆ ಮುಂಚೆಯೇ ಕೊಡಬೇಕಾಗುತ್ತದೆ. ಸರ್ಕಾರ ದವರು ಇದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಎಲ್ಲಾದರೂ ಒಂದು ಭಾಗದಲ್ಲಿ ಅವರು ಹೆಚ್ಚು ಸಂಖ್ಯೆಯಲ್ಲಿ ಇದ್ದರೆ ಅವರಿಗೆ ಶಾಲೆಗಳನ್ನು ಕೊಡುವುದು, ಅವರ ಭಾಷೆಯಲ್ಲಿ ಏನಾದರೂ ಮುಖ್ಯ ಸರ್ಕಾರಿ ಪ್ರಕಟನೆಗಳು ಇದ್ದರೆ ಅವನ್ನು ಪ್ರಕಟಿಸಿ ಅವರಿಗೆ ಮುಟ್ಟಿಸುವುದು ಮತ್ತು ಇನ್ನೂ ಅನೇಕ ರೀತಿಯಲ್ಲಿ ನಡೆಯುತಕ್ಕ ವ್ಯವಹಾರದಲ್ಲಿ ಅವರಿಗೆ ಯಾವತ್ತೂ ಇದು ನಮ್ಮ ರಾಜ್ಯವಲ್ಲ ಎಂಬ ಭಾವನೆ ಬರದ ರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ವ್ಯವಸ್ಥೆ ಗಳನ್ನು ಏರ್ಪಡಿಸಿಕೊಂಡರೆ ಅವರು ಸಮಾಧಾನ ಪಡುತ್ತಾರೆ ಎಂದು ನಾವು ನಂಬಬಹುದು.

ಇವತ್ತು ಪಾನ್ಯವಾಗಿ ಈ ಸಮಸ್ಯೆ ಏಕೆ ನೆಲಗುವಿಗೆ ಬಿದ್ದಿದೆ, ಮೈಸೂರು ರಾಜ್ಯದ ಮಂತ್ರಿ ಗಳು ಏಕೆ ಈ ಸಮಸ್ಯೆಯನ್ನು ನೇರವಾಗಿ ಎದುರಿಸುವುದಕ್ಕೆ ಹಿಂದು ಮುಂದು ನೋಡುತ್ತಾರೆ ಎನ್ನುವುದಕ್ಕೆ ಒಂದು ದೊಡ್ಡ ಕಾರಣ ಏನೆಂದರೆ ಈ ಮರಾಠಿ ಮಾತನಾಡತಕ್ಕ ಜನರು, ಆ ಭಾಗಗಳಿಂದ ಬಂದು ಇಲ್ಲಿ ಪ್ರತಿನಿಧಿಸುತ್ತಾ ಇರತಕ್ಕ ನಮ್ಮ ಮಾನ್ಯಸ್ನೇಹಿತರು ಕಳೆದ ಎಂಟು ವರ್ಷಗಳಿಂದ, ಎಂದರೆ ಈ ರಾಜ್ಯ ಸಂಘಟನೆ ಆದಲಾಗಾಯ್ತು ಯಾರು ಬಂದು ಇಲ್ಲಿ ಮಂಡಿಸಿದ್ದಾರೆ ಅವರು ಪದೇ ಪದೇ ಅದೇ ತಮ್ಮ ಕರ್ತವ್ಯವೋ ಎಂಬಂತೆ ಈ ಒಂದು ವಿಷಯವನ್ನು ಪ್ರಸ್ತಾಪ

ಮಾಡುತ್ತಾ ಇದ್ದಾರೆ ಇದೆಲ್ಲಾ ಮೈಸೂರು ರಾಜ್ಯ ಸರ್ಕಾರದ ಮಂತ್ರಿಗಳಿಗೆ ಒಂದು ವಿಧದ ಪರಿಣಾಮವನ್ನು ಮಾಡಿರಬಹುದು ಎಂದು ನನಗೆ ಅನಿಸುತ್ತದೆ. ಅವರು ಈ ಸಭೆಯಲ್ಲಿ ಮರಾಠಿ ಭಾಷೆಯಲ್ಲೇ ಮಾತನಾಡುವುದು ಮತ್ತು ಈ ಗಡಿಗೆ ಸಂಬಂಧಪಟ್ಟ ವಿಷಯಗಳನ್ನೇ ಯಾವಾಗಲೂ ಮಾತನಾಡುತ್ತಾ ಇರುವುದು ಮತ್ತು ಆ ಹೊರ ಭಾಗಗಳವರಿಗೆ ಸಂಬಂಧಪಟ್ಟವರಂತೆ ಮಾತ ನಾಡುವುದು ಈ ಎಲ್ಲಾ ಕಾರಣಗಳಿಂದ ಅವರು ಹೊರ ಭಾಗಗಳಿಂದ ಬಂದವರು, ನಮ್ಮ ಮೇಲೆ ಧಾಳಿ ಮಾಡುವುದಕ್ಕೆ ತೊಂದರೆ ಕೊಡುವುದಕ್ಕೆ ಅವರು ಬಂದಿದ್ದಾರೆ ಎಂದು ಬಹುಶ: ಮೈಸೂರು ಸರ್ಕಾರದ ಮಂತ್ರಿಗಳಿಗೆ ಅನಿಸಿರಬಹುದು ಎಂದು ನನಗೆ ಭಾಸವಾಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಆ ರೀತಿ ಏನೂ ಇಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಒಂದು ವಿಶೇಷ ಪರಿಸ್ಥಿತಿಯಲ್ಲಿ ಅವರು ಇಲ್ಲಿಗೆ ಆರಿಸಿ ಬಂದು ಇಲ್ಲಿ ಉಪಸ್ಥಿತರು ಇರುವುದರಿಂದ ಮತ್ತು ಕನ್ನಡದಲ್ಲಿ ಮಾತನಾಡುವುದು ಕನ್ನಡ ರಾಜ್ಯದಲ್ಲಿ ಹೊಂದಿಕೊಳ್ಳುವುದಕ್ಕೆ ಮನಸ್ಸು ಮಾಡದೇ ಇರುವುದರಿಂದ ಈ ಸಮಸ್ಯೆ ಯಾವತ್ತಿನಿಂದಲೂ ಉಲ್ಬಣ ಸ್ಥಿತಿಯಲ್ಲೇ ಮುಂದುವರಿದುಕೊಂಡು ಬರುತ್ತಾ ಇದೆ ಮತ್ತು ಈ ಸಭೆಯು ಮುಂದೆ ಜ್ವಲಂತವಾಗಿ ಉಳಿದಿರತಕ್ಕ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರವನ್ನು ಯಾವುದಾದರೂ ರೀತಿಯಲ್ಲಿ ಹುಡುಕಿ ಈ ಸಮಸ್ಯೆ ಮುಗಿಯಿತು ಎಂದು ಮಾಡದಿದ್ದರೆ ಬಹಳ ಕಠಿಣವಾಗುತ್ತದೆ ಆದ್ದರಿಂದ ಈ ಸಮಸ್ಯೆಗೆ ಕೊಡಬೇಕಾದ ಗಂಭೀರ ಮಹತ್ವವನ್ನು ಮತ್ತು ಯೋಗ್ಯ ಮಹತ್ವವನ್ನು ಕೊಟ್ಟು ಇದನ್ನು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸ್ವಾಮಿ, ಈ ವಿಷಯ ಬಂದಾಗಲೆಲ್ಲ ಬೆಳಗಾಂವಿ, ನಿಪ್ಪಾಣಿ, ಕಾರವಾರ ಇವು ಮೂರೂ ಸಹ ಹೆಚ್ಚು ಪ್ರಾಧಾನ್ಯವಾಗಿ ಆಗಾಗ್ಗೆ ನಮ್ಮ ಮುಂದೆ ಬಂದು ನಿಲ್ಲುತ್ತಾ ಇವೆ. ಬೆಳಗಾವಿಯನ್ನು ಕೈ ಬಿಡಬೇಕೇ, ಕಾರವಾರವನ್ನು ಕೈಬಿಡ ಬೇಕೇ, ನಿಪ್ಪಾಣಿಯನ್ನು ಬಿಟ್ಟು ಕೊಡಬೇಕೇ ಎನ್ನುವ ಪ್ರಶ್ನೆ ಏಳಿದೆ ಈ ವಿಚಾರದಲ್ಲಿ ಈ 3 ಪ್ರದೇಶಗಳ ಮೇಲೆ ಶ್ರೀಮಾನ್ ಸುಂಠನಕರ್ ಅವರ ಕಣ್ಣು ಬಿದ್ದ ಹಾಗೆ ಕಾಣುತ್ತದೆ. ಇದರಲ್ಲಿ ಏನೂ ನಾನು ಬಾರ್ಟರ್ ಮಾಡುವುದಕ್ಕೆ ಸಿದ್ಧವಾಗಿಲ್ಲ. ಈ ಭಾಗ ಕೊಡ್ರಿ, ಆ ಭಾಗ ಬೇಡ ಎಂದು ಹೇಳುವುದೂ ಸೂಕ್ತವಲ್ಲ. ಇದರಲ್ಲಿ ಶ್ರೀಮಾನ್ ಹೆಗ್ಗಡೆಯವರು ಶ್ರೀಮಾನ್ ಕದಂ ಅವರಿಗೆ ಸೂಕ್ತವಾದ ಉತ್ತರವನ್ನು ಕೊಟ್ಟಿದ್ದಾರೆ. ಕೊಂಕಣಿ ಭಾಷೆ ಮರಾಠಿ ಭಾಷೆಯ ಒಂದು ಉಪ ಭಾಷೆ ಅಥವಾ ಡೈಯಲೆಕ್ಟ್ ಎಂದು ಹೇಳುವುದಾದರೂ ಕೊಂಕಣಿ ಮಾತನಾಡತಕ್ಕ ಜನರ ಅಫಿನಿಟಿ ಕನ್ನಡಿಗರ ಜೊತೆಯಲ್ಲೇ ಇದೆ, ಪೊಣಾಚೆ ಎಂದು ಹೇಳುತ್ತಾರೆ ಅದು ಬಂದಿದ್ದು ಮರಾಠಿ ಯಿಂದಲೇ ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ಗಡಿಯಲ್ಲಿರತಕ್ಕವರು ಹೆಚ್ಚಿನ ಸಂಖ್ಯೆಯಲ್ಲಿ ಮಾತ ನಾಡತಕ್ಕವರು ಯಾರಿದ್ದಾರೆ ಅವರ ಪರವಾಗಿಯೇ ಇರುತ್ತಾರೆ. ಮುಂಬೈ ಪ್ರಾಂತದ ಪಕ್ಕದಲ್ಲಿ ಗಡಿ ಭಾಗಗಳಲ್ಲಿರತಕ್ಕ ಜನರು ಮೂರು ನಾಲ್ಕು ಭಾಷೆಗಳಲ್ಲಿ ಪ್ರವೀಣರಾಗಿರುತ್ತಾರೆ, ಅವರನ್ನು ಕಲ್ಯಾಣಿ ಬಿಟ್ಟು ಪುಣೆಗೆ ಬರುವವರೆಗೂ ಕನ್ನಡಿಗರು ಎಂದು ಪತ್ತೆ ಹಚ್ಚುವುದೇ ಕಷ್ಟವಾಗುತ್ತದೆ, ಮರಾಠಿ ಅಥವಾ ಹಿಂದಿಯಲ್ಲೇ ಮಾತನಾಡುತ್ತಾ ಇರುತ್ತಾರೆ, ಬೆಳಗಾವಿ ದಾಟಿದ ಮೇಲೆ ಕನ್ನಡ ಪುರು ಮಾಡುತ್ತಾರೆ. ಮಾತ್ರ ಭಾಷೆಯನ್ನು ಬಿಟ್ಟು ವ್ಯಾವಹಾರಿಕ ಭಾಷೆಯನ್ನ ಉಪಯೋಗಿಸುತ್ತಾ ಇರುತ್ತಾರೆ. ಕನ್ನಡಿಗರಿಗೆ ಬೇರೆ ಭಾಷೆಯನ್ನು ಆಡುವುದೇ ಒಂದು ಸೌಜನ್ಯ ವಾಗಿದೆ. ತಮಿಳಿರಿಗೆ ತಮಿಳನಲ್ಲೇ ಕೇಳುತ್ತಾರೆ, ಏನಪ್ಪಾ ಎಲ್ಲಿಗೆ ಹೋಗುತ್ತೀ ಎಂದು ಕೇಳುವು ದಿಲ್ಲ, ಎನ್ನ ಎಂಗೆ ಪೋರೆ ಎಂದು ಕೇಳುತ್ತಾರೆ ಇದು ಕನ್ನಡಿಗರಿಗೆ ಸೌಜನ್ಯರೂಪವಾಗಿ ಬಂದಿರತಕ್ಕ ಬಲಹೀನತೆ ಎಂದು ಹೇಳಬಹುದು. ಅದೇ ಒಬ್ಬ ತಮಿಳು ಮನುಷ್ಯ ಮಾತನಾಡಲಿ ಅಥವಾ ಇನ್ನಾರಾದರೂ ಆಗಲಿ ಅವರು ತಮ್ಮ ಭಾಷೆಯಲ್ಲೇ ಕೇಳುವುದು ತಮ್ಮ ಭಾಷೆಯಲ್ಲೇ ಉತ್ತರ ಕೊಡುವುದು ಅದು ಬೇರೆಯವನಿಗೆ ತಿಳಿವಾದರೂ ತಿಳಿಯಲಿ ಇಲ್ಲದೇ ಇದ್ದರೂ ಹೋಗಲಿ ಬೇರೆಯವನ ಭಾಷೆಯ ಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ, ಅದು ಅವರ ಭಾಷೆಯ ಮೇಲೆ ಇರತಕ್ಕ ಒಂದು ನಿಷ್ಠೆ. ಅದು ಸ್ವಭಾವ. ಆದರೆ ನಮ್ಮ ಭಾವನೆ ಏನಿದೆ ಅದು ನಮ್ಮ ಸ್ವಾಭಿಮಾನವನ್ನು ಬಿಟ್ಟು ಕೂಡತಕ್ಕ ಭಾವನೆ ಬಂದಿದೆ. ಕಾಮರಾಜ ನಾಡರ್ ಅವರು ಇಂಡಿಯಾ ದೇಶದ ಉದ್ದಕ್ಕೂ ತಮಿಳಿನಲ್ಲೇ ಮಾತನಾಡುತ್ತಾ ಇದ್ದಾರೆ. ನಮ್ಮ ಜನ ಹಾಗಲ್ಲ ಈ ಸಭೆಯಲ್ಲಿ ಕನ್ನಡದಲ್ಲಿ ಮಾತ ನಾಡಿದರೆ ಏನಾಗುತ್ತದೆಯೋ ಎಂದು ಅವಮಾನಪಟ್ಟು ಕೂಳ್ಳತಕ್ಕವರು, ಕನ್ನಡ ಒಂದು ಭಾಷೆಯೇ ಅಲ್ಲವೇನೋ, ಅದರಲ್ಲಿ ಶಬ್ದಗಳು ಇದೆಯೋ ಇಲ್ಲವೊ ಎಂದು ಅಂದುಕೊಳ್ಳತಕ್ಕವರು, ಕನ್ನಡದಲ್ಲಿ ಮಾತನಾಡಿದರೆ ದಡ್ಡ ಎಂದು ಅಂದುಕೊಳ್ಳುತ್ತಾರೆಯೋ ಏನೋ ಎಂಬ ರೀತಿಯಲ್ಲಿ ಇನ್‌ಫೀರಿಯಾರಿಟೀ ಕಾಂಪ್ಲೆಕ್ಸ್ ಕನ್ನಡಿಗರಲ್ಲಿ ಇದೆ. ಬೇರೆಯವರಿಗೆ ತಮ್ಮ ಜಾಗವನ್ನು ಬಿಟ್ಟು ಕೊಟ್ಟು ಹಿಂದಕ್ಕೆ ಸರಿಯುವುದು ಅವರ ಸ್ವಭಾವ. ಚಿಕ್ಕಮಗಳೂರು ಮತ್ತು ಶಿವಮೊಗ್ಗಾ ಜಿಲ್ಲೆಗಳಲ್ಲಿ ಬಹು ಭಾಗ ಮಲೆಯಾಳಿ ಜನರ ಕೈ ಸೇರಿದೆ. ಸಾವಿರಾರು ಎಕರೆ ಜಮೀನು ಮಾಡಿ ಕೊಂಡು ಇದ್ದಾರೆ. ಮತ್ತು ಇಲ್ಲಿಗೆ ತಮಿಳರು ಬರುತ್ತಾ ಇದ್ದಾರೆ ಮತ್ತು ಅವರ ಹಕ್ಕನ್ನು

(ಶ್ರೀ ಎಸ್. ಗೋಪಾಲ ಗೌಡ)

ಸ್ಥಾಪನೆ ಮಾಡುತ್ತಾ ಇದ್ದಾರೆ ಅದು ಬೇರೆ ಮಾತು. ಇವತ್ತು ಕೊಂಕಣಿಯವರು ಮರಾಠಿಯವರ ಜೊತೆಯಲ್ಲಿ ಸೇರಿ ಸಂಪರ್ಕವನ್ನು ಬೆಳೆಸಿ ಕಾರವಾರ, ಹಳಿಯಾಳ ಮತ್ತು ಸೂಪ ತಾಲ್ಲೂಕುಗಳು ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಕೇಳುವುದು ನಮ್ಮ ಮರಾಠಿ ಸ್ನೇಹಿತರಿಗೆ ಯೋಗ್ಯವಲ್ಲ ಎಂದು ಬಹಳ ನಮ್ರವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ಹೆಗ್ಗಡೆಯವರು ಗೋವಾವನ್ನು ಮಹಾರಾಷ್ಟ್ರದವರು ಕೇಳುತ್ತಾ ಇದ್ದಾರೆ ಎಂದು ಹೇಳಿದರು. ಗೋವಾದಲ್ಲಿ ಪೋರ್ಚುಗೀಸರ ಭಾಷೆ ಇದೆ. ಮಹಾರಾಷ್ಟ್ರದವರು ಅದನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಪ್ರಯತ್ನ ಮಾಡುತ್ತಾ ಇದ್ದಾರೆ ಕನ್ನಡಿಗರು ಕರ್ನಾಟಕಕ್ಕೆ ಸೇರಿಸಬೇಕೆಂದು ಪ್ರಯತ್ನ ಮಾಡುತ್ತಾ ಇದ್ದರೆ. ಮತ್ತು ಇನ್ನೂ ಕೆಲವರು ಅದು ಹಾಗೆಯೇ ಉಳಿಯಬೇಕೆಂದು ಪ್ರಯತ್ನಮಾಡುತ್ತಾ ಇದ್ದಾರೆ. ಆದ್ದರಿಂದ ಇದು ಗೋವಾ ಜನರಿಗೆ ಬಿಟ್ಟಿದ್ದು ಇದರಲ್ಲಿ ಯಾರೂ ಹಸ್ತಕ್ಷೇಪ ಮಾಡಬಾರದು. ಚವಾಣ್‌ರವರು ಭಾಷಣ ಮಾಡುತ್ತಾ ಗೋವಾ ಮಹಾರಾಷ್ಟ್ರದ್ದು ಎಂದು ಹೇಳಿದರು. ಈಗ ಮಹಾರಾಷ್ಟ್ರದವರ ಜೊತೆಯಲ್ಲಿ ಮತ್ತು ಗೋವಾದವರ ಜೊತೆಯಲ್ಲಿ ನಾನು ಏನಂತಿ ಮಾಡಿಕೊಳ್ಳುವುದಾದರೆ ಏನು ಹೇಳಬಹುದು ಎಂದರೆ, ಕರ್ನಾಟಕ ರಾಜ್ಯದಲ್ಲಿರುವ ಕರಾವಳಿ ಪ್ರದೇಶದಲ್ಲಿ ಗೋವಾ ಮತ್ತು ಮಂಗಳೂರು, ಈ ಎರಡು ಬಂದರುಗಳನ್ನು ಅಭಿವೃದ್ಧಿ ಮಾಡುವುದಾದರೆ ಮತ್ತು ಕರಾವಳಿ ಪ್ರದೇಶವನ್ನು ಅಭಿವೃದ್ಧಿಮಾಡುವುದಾದರೆ ಅದರಿಂದ ಇಡೀ ರಾಷ್ಟ್ರದ ಆದಾಯ, ಸಂಪತ್ತು ಮತ್ತು ಎಲ್ಲ ರೀತಿಯ ಸೌಲಭ್ಯ ಹೆಚ್ಚುತ್ತದೆ. ಕರ್ನಾಟಕಕ್ಕೆ ಇದು ಒಳ್ಳೆಯ ಬಾಗಿಲಾಗುತ್ತದೆ. ಆದ್ದರಿಂದ ನಮ್ಮ ಆಯಾತ ನಿರ್ಯಾತಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆಯೆಂದು ಹೇಳುವುದರ ಜೊತೆಗೆ ಗೋವಾ ಭವಿಷ್ಯ ಕೂಡ ಒಳ್ಳೆಯ ರೀತಿಯಿಂದ ಬೆಳೆಯುವುದಕ್ಕೆ ಸಾಧ್ಯ. ರೈಲ್ವೆಯನ್ನು ನೇರವಾಗಿ ಬೆಳಗಾವಿಯಿಂದ ಮರ್ಮಗೋವಾವರೆಗೆ ಹಾಕಿದರೆ ಹೆಚ್ಚು ಸೌಲಭ್ಯ ಸಿಕ್ಕುತ್ತದೆ. ನಾವು ಗೋವಾದಿಂದ ಹೊರಟರೆ ಮುಂಬಯಿ ಬಂದರಿಗೆ ಹೋಗಲೇ ಬೇಕು. ಇದನ್ನು ವಿಮರ್ಶೆಮಾಡಿ. ಮ್ಯಾಪ್ ಇಟ್ಟುಕೊಂಡು ನಿಷ್ಕಲ್ಮಷ ಮನಸ್ಸಿಂದ ಪರಿಶೀಲಿಸಿದರೆ ಗೋವಾದಿಂದ ಮಂಗಳೂರುವರೆಗಿನ ಪ್ರದೇಶವನ್ನು ಒಂದೇ ಆಡಳಿತಕ್ಕೆ ಸೇರಿಸಿದರೆ ಸೌಲಭ್ಯ ಹೆಚ್ಚುತ್ತದೆ. ಅದಕ್ಕೆ ಕೋಟಿಗಟ್ಟಲೆ ನಾವು ಖರ್ಚುಮಾಡಬೇಕಾಗುತ್ತದೆ. Economically viable ನಡೆಸಿಕೊಂಡು ಹೋಗುವಾಗ ಪುನಃ ರಾಜ್ಯ ವಿಂಗಡಿಸಬಹುದು. ಈಗಿರುವ ರೇಖೆಯೇ ಶಾಶ್ವತ ವೆಂದು ನಾನು ತಿಳಿದುಕೊಂಡಿಲ್ಲ. ಇತಿಹಾಸವಾಗಲ ಅಥವ ಬೇರೆ ಹಳೆಯ ಸಂಪರ್ಕವಾಗಲಿ ಈಗ ನಾನು ಹೇಳುವುದಿಲ್ಲ. ಹೇಳಬೇಕೆಂದರೆ ಮಂಗೇಶ ಎಂಬ ಗೋವಾದಲ್ಲಿರುವ ದೇವರು ಕನ್ನಡಿಗರ ದೇವರು. ಹನುಮಂತ ಕನ್ನಡದವನು. ದೇಶದ ಇನ್ನಾವ ಭಾಗದಲ್ಲೂ ಈ ದೇವರಿಲ್ಲ. ನಮ್ಮವರೇ ಮುಂಚೆ ಅಲ್ಲಿ ಆಳಿದರೆಂಬುದಕ್ಕೆ ಸಾಕಾದಷ್ಟು ಪುರಾವೆ ಇದೆ. ಕರ್ನಾಟಕದವರೇ ಬಹಳ ಮುಂದೆ ಹೋಗಿ ಹಡಗು ನಡೆಸಿದರೆಂದು ಇತಿಹಾಸ ಇದೆ. ಅದನ್ನೆಲ್ಲಾ ಹೇಳಲು ನಾನು ತಯಾರಾಗಿಲ್ಲ, ಇತಿಹಾಸದ ವಿಚಾರವಿರಲಿ. ನಮ್ಮ ದೃಷ್ಟಿ ಭವಿಷ್ಯದಮೇಲೆ ನಿಂತಿದೆಯೇ ಹೊರತು ಹಿಂದೆ ನಡೆದುದರ ಮೇಲಲ್ಲ. ನಾನು ಗೋವಾ ನಮಗೆ ಕೊಡಿ ಎಂದು ಆಶೆಯ ಆದಾರದಮೆಲೆ ಕೇಳುತ್ತಿಲ್ಲ. ಜನರ ಭವಿಷ್ಯದ ಹಿತದೃಷ್ಟಿಯಿಂದ ಹಾಗೂ ಕರ್ನಾಟಕ ಹಿತದೃಷ್ಟಿಯಿಂದ, ಒಟ್ಟಿನ ಭಾರತದ ಹಿತದೃಷ್ಟಿಯಿಂದ ಗೋವಾ ಜನರ ಹಿತದೃಷ್ಟಿಯಿಂದ ಹೇಳುತ್ತಿರುವುದು. ಗೋವಾದವರಿಗೆ ಕಾಳೀನದಿಯ ಯೋಜನೆಯಿಂದ ತಯಾರಾಗುವ ವಿದ್ಯುಚ್ಛಕ್ತಿಯಲ್ಲ ಪಾಲು ಬೇಕಾದರೆ ಕೊಡಬಹುದು. ಗೋವಾದಲ್ಲಿ ಎಲ್ಲಾ ಸೌಲತ್ತೂ ಕಲ್ಪನೆಮಾಡಿಕೊಡಬಹುದು. ನಾವು ಸರ್ವ ಸ್ವತಂತ್ರ ರಾಜ್ಯಗಳನ್ನು ಪಡೆದಿಲ್ಲ. ಎಲ್ಲ ವ್ಯವಹಾರಗಳೂ ಕೇಂದ್ರ ಸರ್ಕಾರದವರ ಕೈಲೇ ಇರುತ್ತವೆ. ಇಡೀ ಭಾರತದ ಅಭಿವೃದ್ಧಿಯ ದೃಷ್ಟಿಯಿಂದ ಗೋವಾ, ಮಂಗಳೂರು, ಭಟ್ಕಲ್, ಮಲ್ಪೆ ಮುಂತಾದು ವೆಲ್ಲವನ್ನೂ ಒಂದೇ ರಾಜ್ಯದ ಆಡಳಿತಕ್ಕೊಪ್ಪಿಸಿ ಕರಾವಳಿ ಪ್ರದೇಶವನ್ನು ಸುವ್ಯವಸ್ಥಿತವಾಗಿ ಅಭಿವೃದ್ಧಿಮಾಡಿದರೆ ಎಲ್ಲಾ ರಾಜ್ಯಗಳಿಗೂ ಅನುಕೂಲವಿದೆ. ಈ ದೃಷ್ಟಿಯಿಂದ ನಾನು ಗೋವಾ ಕೇಳುತ್ತೇನೆ ಮತ್ತು ಕೊಂಕಣಿ ಮಾತನಾಡುವವರು ಕನ್ನಡವನ್ನು ತಮ್ಮ ವ್ಯವಹಾರ ಭಾಷೆಯಾಗಿ ಒಪ್ಪಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರೂ ಒಪ್ಪಿದ್ದಾರೆ. ಕೊಂಕಣ ಎಂಬುದು ಹಿಂದೆ ಒಂದು ರಾಜ್ಯವಾಗಿತ್ತು. ಆಮೇಲೆ ಅದು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಎಂದು ವಿಭಾಗವಾಯಿತು. ಕೊಂಕಣಿ ಜನರು ಹರಿದಾಡುವ ಜನರು. ಅವರು ಉದ್ಯೋಗವನ್ನು ಹುಡುಕಿಕೊಂಡು ಎಲ್ಲ ಕಡೆಗೂ ಹೋಗುತ್ತಾರೆ. ಮುಂಬಯಿನಲ್ಲಿ ಮರಾಠ ಜನರು ಅವರನ್ನು ಕೀಳಾಗಿ ಕಾಣುತ್ತಾರೆ. ಆದರೆ ಕೊಂಕಣಿಯವರು ಮರಾಠಿ ಭಾಷೆಯವರಲ್ಲ. ಕೊಂಕಣಿಗೆ ಮರಾಠಿ ಸೇರಿಸಿ ಬಹಳ ಅನ್ಯಾಯಮಾಡಿದ್ದಾರೆ. ಕಾರವಾರವನ್ನು ಮಹಾರಾಷ್ಟ್ರಕ್ಕೆ ತಗೆದುಕೊಂಡು ಹೋಗ ಬೇಕೆಂದಿರುವುದು ಸರಿಯಲ್ಲ. ವಾಸ್ತವಾಂಶ ನೋಡಬೇಕು. ಕಾರವಾರ, ಸೂಪ, ಖಾನಾಪುರ,

ಹಲಿಯಾಳ ಇಷ್ಟು ಪ್ರದೇಶಗಳನ್ನು ಈಗ ಕೇಳುತ್ತಿದ್ದಾರೆ. ಅಲ್ಲಿರುವವರು ಮರಾಠಿ ಮಾತನಾಡುವವರು ಎಂದು ಹೇಳುತ್ತಾರೆ. ಆದರೆ ಕೊಂಕಣಿಯವರು ಮರಾಠರು ಆಗುವುದಿಲ್ಲ. ಭೌಗೋಳಿಕವಾಗಿಯೂ ಕೂಡ ಆ ಪ್ರದೇಶ ಕನ್ನಡ ವಿಭಾಗದಲ್ಲೇ ಸೇರಿದೆ.

Sri B. R. SUNTHANKAR (Belgaum).—May I know whether any member has ever visited Supa, Nipani. Let him go and speak.

Sri B. D. JATTI.—I have gone a number of times and I have even addressed a meeting in Supa. Let not the Hon'ble member think that he is the only authority. I have addressed public meetings. Sri Kadam may not follow Kannada with a purpose.

Sri B. P. KADAM (Karwar).—You can never follow the language of others. You can never understand the meaning of others' language.

Sri B. D. JATTI.—It is absolutely wrong. He takes too much upon himself. He claims that people in Supa do not know Kannada; he also claims that he does not know Kannada. Whenever he comes to me he speaks Kannada.

Sri B. P. KADAM.—No, Sir. It is a defamation. I never said that I do not know Kannada. I only said that I do not have that much of knowledge in Kannada as others have.

ಶ್ರೀ ಎಸ್. ಗೋಪಾಲಗೌಡ.—ನಾನು ನಿಪ್ಪಾಣಿ ಮುಂತಾದ ಕನ್ನಡ ಭಾಗಗಳನ್ನು ಸ್ಥೂಲವಾಗಿ ಸೂಕ್ಷ್ಮವಾಗಿ ನೋಡಿ ತಿಳಿದುಕೊಂಡಿದ್ದೇನೆ. ಅಲ್ಲಿನವರನ್ನು ನಾನು ಬಂದು ಭೇಟಿ ಮಾಡಿಲ್ಲದಿರಬಹುದು. ರಂಗನಾಥ ಅವರು ತಂಗಿಯನ್ನು ನಿಪ್ಪಾಣಿಗೆ ಕೊಟ್ಟಿದೆ. ಹೆಚ್ಚಿನ ಸಂಬಂಧ ಆ ಪ್ರಕಾರ ನಮಗಿದೆ. ಆ ಭಾಗದ ಎಲ್ಲ ಪಟ್ಟಣಗಳಲ್ಲೂ ನಮ್ಮವರು ಹೆಚ್ಚು ಸಂಖ್ಯೆಯಲ್ಲಿ ವ್ಯವಹಾರ ಉದ್ಯಮಗಳಲ್ಲಿ ನಿರತರಾಗಿದ್ದಾರೆ. ಸೊಲ್ಲಾಪುರ ನಮ್ಮ ಕೈಬಿಟ್ಟು ಹೋಗುವುದಕ್ಕೆ ಕಾರಣವಿದೆ. ಅವರು ಹೆಚ್ಚಾಗಿ ಊರು ಬಿಟ್ಟು ಹೊರಗಡೆಗೆ ಹೋಗುತ್ತಾರೆ. ಎಲ್ಲ ಪೇಟೆಗಳಲ್ಲಿಯೂ ಹೆಚ್ಚಿನ ವ್ಯಾಪಾರಗಳನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳಬಹುದು. ಹಾಗೆ ಇತಿಹಾಸವನ್ನು ನೋಡಿ ಹೇಳುವುದಾದರೆ ನಮ್ಮ ಕರ್ನಾಟಕದ ಕನ್ನಡ ಜನರು ಹಿಂದೆ ಮಧುರೆಯತನಕ ಕೂಡ ಹೋಗಿದ್ದರು ಎಂದು ಈಗ ಆ ಭಾಗಗಳು ಹರಿದು ಹೋಗಿವೆ ಎಂದೂ ಹೇಳಬಹುದು. ಈಗ ಅಲ್ಲಿರುವ ಕೆಲವು ಹಳ್ಳಿಗಳಲ್ಲಿಯೂ ಕನ್ನಡ ಮಾತನಾಡತಕ್ಕ ಜನರೂ ಇದ್ದರು. ಈಗ ನಮ್ಮ ಭಾಗಕ್ಕೆ ಬಂದಿರುವ ಗುಲ್ಬರ್ಗಾದಲ್ಲಿರುವ ಕನ್ನಡ ಜನರು ಮಾತನಾಡುವ ಭಾಷೆಯನ್ನು ಅಲ್ಲಿಯವರು ಲಿಂಗಾಯತ ಭಾಷೆ ಎಂದು ಹೇಳುತ್ತಿದ್ದರು. ಅಲ್ಲಿದ್ದ ಮುಲ್ಕ ಭಾಷೆಯಲ್ಲೇ ವ್ಯವಹಾರಗಳನ್ನು ಮಾಡುತ್ತಿದ್ದರು. ಇದು ಅಲ್ಲಿ ಸಾವಿರಾರು ವರ್ಷಗಳಿಂದಲೂ ಬೆಳೆದುಕೊಂಡೇ ಬಂದಿರತಕ್ಕಂಥದ್ದು. ಹಾಗೆ ಈಗ ಅಕ್ಕಲ್‌ಕೋಟೆ ಹಾಗೂ ಸೋಲಾಪುರ ಈ ಭಾಗಗಳಲ್ಲಿ ಅಲ್ಲಿನ ಜನ ಮಾತನಾಡುವ ಭಾಷೆಯನ್ನು ನೋಡಿದರೆ ಅವರು ಒಂದೆರಡು ಶಬ್ದಗಳನ್ನು ಪಯೋಗಿಸಿದರೆ ಅದರ ಜೊತೆಯ ಕೆಲವು ಮರಾಠಿ ಹಾಗೂ ಉರ್ದು ಶಬ್ದಗಳನ್ನು ಸೇರಿಸಿ ಮಾತನಾಡುತ್ತಾರೆ. ಅವರು ಬರುವಂತಹ ಗಡಿ ಪ್ರದೇಶದಲ್ಲಿ ವಾಸ್ತವವಾಗಿ ಅಲ್ಲಿ ಬರತಕ್ಕ ಒಂದು ಜನರ ತುಳಿತಕ್ಕೆ ಸಿಕ್ಕಿಕೊಂಡು ತಮ್ಮತನವನ್ನು ಕಳೆದುಕೊಂಡು ಶಂಕೆಪಡುವ ಸ್ಥಿತಿ ಇದೆ. ಅಲ್ಲದೆ ಈ ಭಾಗಗಳನ್ನು ನಾವು ಪುನಃ ಪಡೆಯಬೇಕು ಅದಕ್ಕಾಗಿ ನಮ್ಮ ಜನರು ವೋಟು ಮಾಡಿ ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ ಎನ್ನುವಂತಹ ವಾದಗಳನ್ನು ಮಾಡುವುದು ಸಮಂಜಸವಲ್ಲ. ನಮಗೆ ನಿಪ್ಪಾಣಿ ಪ್ರದೇಶಬೇಕು ಎಂದರೆ ಕೇಳಿ, ಬೆಳಗಾಂ ಭಾಗ ನಮಗೇ ಬೇಕು ಎಂದು ಕೇಳಬಹುದು. ಅದನ್ನು ಕೊಡಬೇಕೆಂದು ಕೇಳುವಾಗ ನೀವುಗಳು ಈ ತರಹದ ಒಂದು ಅಂಕೆ ಸಂಖ್ಯೆಗಳನ್ನು ಇಲ್ಲಿ ಕೊಡುವುದರಿಂದ ಏನಾಗುತ್ತದೆ ಎಂದರೆ ಸರಿಯಾದ ಬೆಳಕನ್ನು ಚಲ್ಲುವುದಕ್ಕೆ ಬದಲಾಗಿ ಕತ್ತಲೆಯನ್ನು ಜಾಸ್ತಿ ಮಾಡಿಕೂಂಡಂತಾಗುತ್ತದೆ. ನಾವು ಇಂದು ಭಾರತದಲ್ಲಿ ಬಾಲ್ಕನ್ನೈಸೇಷನ್ನು ಮಾಡಲು ಹೊರಟಿಲ್ಲ. ಇದಕ್ಕಿಂತ ಹೆಚ್ಚಿಗೆ ಏನು ಮಾಡಿದ್ದಾರೆಂದರೆ ರಾಜ್ಯಕ್ಕೆ ಹೊಂದಿಕೊಂಡು ಇರತಕ್ಕ ಸಾಮಾನ್ಯವಾದ ಭಾಗಗಳಲ್ಲಿ ಅಲ್ಲಿರುವ ಭಾಷೆಯ ಆಧಾರದ ಮೇಲೆ ಅಡಳಿತದ ಘಟಕವನ್ನು ನಡೆಸುವಾಗ ತೊಂದರೆ ಬರುವುದಾಗಿದ್ದರೆ ಅಂತಹ ಭಾಗದಲ್ಲಿ ನಮ್ಮ ಬೇಡಿಕೆಯನ್ನು ಮಾಡಬಹುದು. ಆದರೆ ಅಲ್ಲಿನ ಜನ ಸುರಕ್ಷಿತವಾಗಿದ್ದು ಹೊಂದಿಕೊಂಡು ಹೋಗುತ್ತಿದ್ದರೆ ಅಂತಹ ಪ್ರದೇಶಗಳನ್ನು ಪಡೆಯಬೇಕೆಂದು ಒತ್ತಾಯ ಮಾಡಬೇಕಾಗಿಲ್ಲ. ಇಲ್ಲಿ ಜನಸಂಖ್ಯೆಯನ್ನು ಅದಲುಬದಲು ಮಾಡಿಕೊಳ್ಳುವ ಪ್ರಶ್ನೆಯಲ್ಲ. ನಾನು ಮಾನ್ಯ ಸ್ನೇಹಿತರಾದ ಶ್ರೀಮಾನ್ ವಿ. ಎಸ್. ಪಾಟೀಲರಲ್ಲಿ ವಿನಂತಿ ಮಾಡಿಕೊಳ್ಳುವುದು ನಮ್ಮ ಸೂಕ್ತವಾದ ಹಾಗೂ

(ಶ್ರೀ ಎಸ್. ಗೋಪಾಲ ಗೌಡ)

ಸಮಂಜಸವಾದ ಮತ್ತು ಯೋಗ್ಯವಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಮುಂಡಿಸಿದರೆ, ಅದನ್ನು ಸರಕಾರ ಮಾನ್ಯ ಮಾಡಬಹುದು. ಅದರ ಜೊತೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ನೀವೆಲ್ಲರೂ ಅಂತಹ ಒಂದು ವಾತಾವರಣವನ್ನು ಅವರಿಗೆ ಕಲ್ಪಿಸಿ ಕೊಡಿ. ಎಂದು ನಾನು ಇಲ್ಲಿ ಕೇಳುತ್ತೇನೆ. ಶ್ರೀಮಾನ್ ಕದಂರವರು ಹೇಳುವಂತೆ ಕಾರವಾರವನ್ನು ಕೊಡಬೇಕೆಂದು ಕ್ಷೇಳಿದರೆ ಅವರ ಆಸೆ ಈಡೇರುವುದಿಲ್ಲ ಎಂದು ನಾನು ಕೇಳುತ್ತೇನೆ. ಇದರಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಕೊಟ್ಟು ಮತ್ತು ತೆಗೆದುಕೊಳ್ಳುವ ಒಂದು ಮನೋಭಾವವನ್ನು ಕಲ್ಪಿಸುವಾಗ ಅದಕ್ಕೆ ತಕ್ಕ ವಾತಾವರಣ ಕಲ್ಪಿಸಬೇಕು ಮತ್ತು ಯಾರೂ ಇದನ್ನು ಟೇಪು ತೆಗೆದುಕೊಂಡು ಹೋಗಿ ಅಳತೆ ಮಾಡಬೇಕಾಗಿಲ್ಲ. ಮೇಲಾಗಿ ಬಾರ್ಡರಿನಲ್ಲಿರುವ ಕೆಲವು ಹಳ್ಳಿಗಳಲ್ಲಿ ಕನ್ನಡ ಮಾತನಾಡತಕ್ಕ ಜನರಿದ್ದರೂ ಅವರುಗಳು ಮರಾಠಿ ಭಾಷೆಯಾಡುವ ಪ್ರದೇಶದಲ್ಲಿದ್ದರೂ ಅಲ್ಲಿಯೇ ಉಳಿಯಬೇಕು. ಬಹುದಿನಗಳಿಂದ ಕನ್ನಡ ಮಾತನಾಡುವ ಜನ ಮರಾಠಿ ಭಾಷೆಯಾಡುವ ಜನರಾಗಿರಬಹುದು ಮತ್ತು ಅವರು ಅಲ್ಲಿಯೇ ನೆಲಸಿರುವುದರಿಂದ ಮರಾಠಿಗರೊಂದಿಗೆ ಮುನಿಸಿಪಾಲಿಟಿಗಳಿಗೆ ಹಾಗೂ ಗ್ರಾಮ ಪಂಚಾಯತಿಗಳಿಗೆ ಚುನಾಯಿತರಾಗಿ ಬಂದಿರಬಹುದು, ಅದರಿಂದ ಇವೊತ್ತು ನಾವು ಯಾವ ಕಾರಿಡಾರನ್ನೂ ಕೇಳುತ್ತಿಲ್ಲ. ಆಸ್ಟ್ರೇಲಿಯಾದಲ್ಲಿ ನೋಡುವುದಾದರೆ ಅಲ್ಲಿ ನೇರವಾಗಿ ಎಲ್ಲ ಭಾಗಕ್ಕೂ ಗೆರೆ ಎಳೆದು ಬಿಟ್ಟಿದ್ದಾರೆ. ಆ ರೀತಿ ಇಲ್ಲಿ ನೇರವಾಗಿ ಗೆರೆ ಎಳೆಯುವುದಕ್ಕೆ ಸಾಧ್ಯವಿಲ್ಲ. ಭಾಷೆ ನಿಜವಾಗಿಯೂ ಜೀವಂತ ಸಂಬಂಧವನ್ನು ಇಚ್ಚಿಸುತ್ತದೆ. ದೇಶದಲ್ಲಿ ಭಾಷೆಯ ಆಧಾರದ ಮೇಲೆ ಜನರು ತಮ್ಮ ಜೀವನವನ್ನು ರೂಪಿಸಿ ಕೊಂಡು ಆಯಾ ಪ್ರದೇಶಗಳಲ್ಲಿ ಸವಲತ್ತುಗಳನ್ನು ಪಡೆಯುತ್ತ ಬಂದಿದ್ದಾರೆ. ಅಂತಹ ನೇರವಾದ ಗೆರೆಯನ್ನು ಇಲ್ಲಿ ಎಳೆಯುವುದಕ್ಕೆ ಶಕ್ಯವಿಲ್ಲ. ಬೆಳಗಾಂ ಹತ್ತಿರ ಇದೆ ಎಂದರೆ ನಾಳೆ ಕೊಲ್ಹಾಪುರ ಇನ್ನೊಂದು ಭಾಗಕ್ಕೆ ಸಮೀಪವಾಗಿದೆ ಎಂದು ಹೇಳಬಹುದು. ಈ ರೀತಿಯಾಗಿ ಕಂಟಿಗ್ಯುಯಿಟಿ ಎಂದು ತೋರಿಸುವುದಕ್ಕೆ ಇಂತಹ ಅಂಕೆ ಸಂಖ್ಯೆಗಳನ್ನು ತಂದು ತೋರಿಸಿದರೆ ಅದು ತಪ್ಪಾಗುತ್ತದೆ. ಯಾವ ಕಾರಿಡಾರ್ ನಮಗೆ ಬೇಕಿಲ್ಲ ಮತ್ತು ನೇರವಾದ ಯಾವ ಗೆರೆಯೂ ಬೇಕಿಲ್ಲ. ಸಾಮಾನ್ಯವಾಗಿ ದೇಶದ ಜನರೊಡನೆ ಅನುಸರಿಸಿಕೊಂಡು ಹೊಂದಾಣಿಕೆ ಮಾಡಿಕೊಂಡರೆ ಸಾಧ್ಯವಾಗಬಹುದು. ಅಂತಹ ಒಂದು ಸುಧಾರಣೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲವೇ ಎನ್ನುವುದನ್ನು ಸ್ವಲ್ಪ ವಿಚಾರ ಮಾಡಬೇಕು. ಇವೊತ್ತು ಗ್ರಾಮವನ್ನು ಒಂದು ಘಟಕವನ್ನಾಗಿ ಮಾಡಿಕೊಳ್ಳಬೇಕು ಎನ್ನುವ ಒಂದು ವಾದ ಬೆಳೆದುಕೊಂಡು ಬಂದಿದೆ. ಗ್ರಾಮಾಂತರದೊಳಗಿರುವ ಜನರ ಎಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡು ವಿಚಾರ ಮಾಡಬೇಕಾಗುತ್ತದೆ. ಈ ಹಿಂದೆ ಮಾನ್ಯ ಪಟಸ್ಕರವರು ಒಂದು ಸಲಹೆ ತಂದಿದ್ದರು. ಅದು ಎರಡು ಮೂರು ಗ್ರಾಮಗಳನ್ನು ಭಾಷೆಯ ಆಧಾರದ ಮೇಲೆ ಸೇರಿಸುವಾಗ ಒಂದು ಗ್ರಾಮ ನದಿಯ ಆಚೆ ದಂಡೆಯಲ್ಲಿದ್ದರೆ ಅದನ್ನು ಒಂದೇ ಭಾಗಕ್ಕೆ ಸೇರಬೇಕು ಎಂದು ಆ ನೀತಿಯನ್ನು ಅನ್ವಯಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದರು. ಇವೊತ್ತು ಸಾಧಾರಣವಾಗಿ ಜನಕ್ಕೆ ಅನುಕೂಲವಿದೆಯೇ ಇಲ್ಲವೇ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಆ ಮಟ್ಟದಲ್ಲಿ ಹಾನಿಯೇನೂ ಇಲ್ಲ ಎಂದು ಕಂಡು ಬಂದರೆ ಗ್ರಾಮವನ್ನು ಘಟಕವನ್ನಾಗಿ ಇಟ್ಟುಕೊಂಡು ಇನ್ನುಳಿದ ಬೇರೆ ಭಾಗಗಳನ್ನೂ ಸೇರಿಸಿಕೊಂಡು ಹೊಂದಾಣಿಕೆ ಮಾಡುವುದಕ್ಕೆ ಯಾವ ಅಭ್ಯಂತರವೂ ಇರದಿರಬಹುದು. ಈ ಸಭೆಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಪಾಟೀಲರವರು ತಂದಿರುವ ನಿರ್ಣಯವನ್ನು ಪರಿಶೀಲನೆ ಮಾಡುವುದಕ್ಕೆ ನಾಲ್ಕು ಕಾರಣಗಳನ್ನು ಕೊಟ್ಟಿದ್ದಾರೆ. ಮೊದಲನೆಯದು, ಭಾಷಾ ಸಂಖ್ಯಾತರು. ಭಾಷೆಯ ಸಂಖ್ಯೆ ಎಂದರೆ ಶೇಕಡಾ ಐವತ್ತಕ್ಕಿಂತ ಹೆಚ್ಚು ಜನರು ಇದ್ದು ಅದರಲ್ಲೂ ಮೆಜಾರಿಟಿಯಲ್ಲಿರುವ ಜನರು ಎಂದರೆ ಶೇಕಡಾ ಎಪ್ಪತ್ತರಷ್ಟು ಒಂದೇ ಭಾಷೆಯನ್ನಾಡುವವರಾಗಿರಬೇಕು ಹಾಗಿದ್ದರೆ ಒಂದೇ ಭಾಷೆಯ ರಾಜ್ಯಕ್ಕೆ ಸೇರಬೇಕು ಎನ್ನುವುದನ್ನು ರಾಜ್ಯ ಪುನರ್ವಿಂಗಡಣೆ ಮಾಡಿದಾಗ ಅಲ್ಲಿದ್ದವರೂ ಒಪ್ಪಿದ್ದಾರೆ. ಬೇರೆಯವರೂ ಒಪ್ಪುತ್ತಾರೆ. ಕೇವಲ ಒಂದು ಭಾಷೆಯ ಮೇಲೆ ನಿರ್ಧಾರ ಮಾಡುವುದಿಲ್ಲ. ಭಾಷೆಯಾಡುವವರೂ ಮೆಜಾರಿಟಿಯಲ್ಲಿರಬೇಕು. ಹಾಗಿಲ್ಲದಿದ್ದರೆ ಹೊಂದಾಣಿಕೆ ಮಾಡುವುದು ಕಷ್ಟವಾಗುತ್ತದೆ. ಎನ್ನುವುದನ್ನು ಇಲ್ಲಿ ಗಮನಿಸಬೇಕು. ಭಾಷೆಯಾದ ಮೇಲೆ ಎರಡನೇದು ಪ್ರಾದೇಶಿಕ ಸಾಮೀಪ್ಯದ ಬಗ್ಗೆ ಹೇಳಿದ್ದಾರೆ, ಯಾವುದೇ ಭಾಗದಲ್ಲಿ ಹೊಂದಾಣಿಕೆಯಾಗಬೇಕಾದರೆ ಹೆಚ್ಚು ಜನಸಂಖ್ಯೆ ಇರುವವರು ಅಲ್ಲಿದ್ದಾರೆಂದು ಇನ್ನೊಂದು ರಾಜ್ಯಕ್ಕೆ ಸೇರಿಸುವುದಕ್ಕೆ ಆಗುವುದಿಲ್ಲ. ಗ್ರಾಮವನ್ನು ಕನಿಷ್ಟ ಘಟಕವನ್ನಾಗಿ ಮಾಡುವಾಗ ಬಹು ಸಂಖ್ಯಾತರ ಅಭಿಪ್ರಾಯಗಳನ್ನಿಟುಕೊಂಡು ನಿರ್ಧಾರ ಮಾಡಬೇಕೆಂದು ಮಾನ್ಯ ಪಾಟೀಲರು ಇಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ಸಾಮಾನ್ಯ ಜನರ ಅಭಿಪ್ರಾಯಗಳು ಈಗಾಗಲೇ ವ್ಯಕ್ತವಾಗಿದೆ. ಅಲ್ಲದೆ ಕೆಲವು ಜನರು ಗ್ರಾಮ ಪಂಚಾಯತಿಗಳಿಗೆ ಹಾಗೂ ವಿಧಾನಸಭೆಗೆ ಚುನಾಯಿತ

ರಾಗಿ ಬಂದಿರಬಹುದು. ಆದರೆ ನಮ್ಮ ಸ್ನೇಹಿತರಾದ ಶ್ರೀಮಾನ್ ಕದಂರವರು ಹೇಳುವ ಹಾಗೆ ಮರಾಠಿ ಭಾಷೆಗಾಗಿ ಎಂದು ಇಲ್ಲಿ ಅವರನ್ನು ಚುನಾಯಿಸಿ ಕಳುಹಿಸಿದ್ದಾರೆ ಎನ್ನುವ ವಾದ ಸರಿಯಲ್ಲ. ಪೋಟುಗಳನ್ನು ಜನ ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ ಎನ್ನುವ ಪ್ರಶ್ನೆ ಬೇರೆ. ಈ ವಾದದಂತೆ ಅವರು ಕಾರವಾರ ನಮ್ಮ ದೇಶದಿಂದ ಹೊರಕ್ಕೆ ಹೋಗಲಿಲ್ಲ. ಇದು ಸಮಂಜಸವಾದ ಪ್ರಶ್ನೆಯಲ್ಲ. ಇನ್ನೊಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ.

ಉಪಾಧ್ಯಕ್ಷರು.—ಸಭೆ ಈಗ ಎದ್ದು, 29-6-1964ನೇ ಸೋಮವಾರದ ದಿನ 12-30 ಗಂಟೆಗೆ ಮತ್ತೆ ಸೇರುತ್ತದೆ.

———

The House adjourned at Thirty Minutes past Twelve of the Clock to meet again at Thirty Minutes past Twelve of the Clock on Monday, the 29th June 1964.

———